ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ Postal Reg. No. BDR/054/2026-2027 Email: mallammanudi@gmail.com E-paper: www.mallammanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಸಂಪಾದಕರು: ರಮೇಶರೆಡ್ಡಿ | 9448 604450

Mallammanudi Regional News Paper | Editor: Ramesh Reddy | RNI NO:KARKAN/2011/48371

VOLUME-13 ಸಂಪುಟ:13 | ISSUE- ಸಂಚಿಕೆ: 09 | PAGE- ಪುಟ 8 | ಸೋಮವಾರ 10.02.2025 | RS.ಬೆಲೆ 2/-

# ಛತ್ತೀಸ್‌ಗಢ:31 ನಕ್ಸಲರ ಹತ್ಯೆ, ಇಬ್ಬರು ಪೊಲೀಸರು ಹುತಾತ್ಮ

ಮಲ್ಲಮ್ಮನುಡಿವಾರ್ತೆ ಬಿಜಾಪುರ (ಛತ್ತೀಸಗಢ):ಫೆ.9: ನಕ್ಸಲ್ ವಿರೋಧಿ ಕಾರ್ಯಾಚರಣೆಯಲ್ಲಿ ಭದ್ರತಾ ಪಡೆಗಳು ಛತ್ತೀಸ್‌ಗಢದ ಬಿಜಾಪುರ ಜಿಲ್ಲೆಯಲ್ಲಿ ಭಾನುವಾರ ನಡೆಸಿದ ಎನ್‌ಕೌಂಟರ್‌ನಲ್ಲಿ 31 ನಕ್ಸಲರನ್ನು ಹೊಡೆದುರುಳಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ನಕ್ಸಲರೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಇಬ್ಬರು ಭದ್ರತಾ ಸಿಬ್ಬಂದಿಯೂ ಹುತಾತ್ಮರಾಗಿದ್ದಾರೆ ಮತ್ತು ಇಬ್ಬರು ಗಾಯಗೊಂಡಿದ್ದಾರೆ ಎಂದು ಅವರು ಹೇಳಿದರು.

ಈ ಘಟನೆಯೊಂದಿಗೆ, ಈ ವರ್ಷ ಇದುವರೆಗೆ ರಾಜ್ಯದಲ್ಲಿ ನಡೆದ ಪ್ರತ್ಯೇಕ ಎನ್‌ಕೌಂಟರ್‌ಗಳಲ್ಲಿ 81 ನಕ್ಸಲರನ್ನು ಭದ್ರತಾ ಪಡೆಗಳು ಹೊಡೆದುರುಳಿಸಿದ್ದಾರೆ. ಇಂದ್ರಾವತಿ ರಾಷ್ಟ್ರೀಯ ಉದ್ಯಾನವನ ಪ್ರದೇಶದ ಅರಣ್ಯದಲ್ಲಿ ಬೆಳಗ್ಗೆ ವಿವಿಧ ಭದ್ರತಾ ಪಡೆಗಳು ನಡೆಸಿದ ಜಂಟಿ ನಕ್ಸಲ್ ವಿರೋಧಿ ಕಾರ್ಯಾಚರಣೆ ವೇಳೆ ಗುಂಡಿನ ಚಕಮಕಿ



ನಡೆದಿದೆ. ಎನ್‌ಕೌಂಟರ್‌ನಲ್ಲಿ ಮೂವತ್ತೊಂದು ನಕ್ಸಲರು ಹತರಾಗಿದ್ದಾರೆ ಎಂದು ಬಸ್ತಾರ್ ರೇಂಜ್‌ನ ಪೊಲೀಸ್ ಮಹಾನಿರೀಕ್ಷಕ ಸುಂದರರಾಜ್ ಪಿ ತಿಳಿಸಿದ್ದಾರೆ. ಸ್ಥಳದಿಂದ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳು ಮತ್ತು ಸ್ಫೋಟಕಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ. ಗುಂಡಿನ ಚಕಮಕಿಯಲ್ಲಿ ರಾಜ್ಯ ಪೊಲೀಸ್‌ನ ಜಿಲ್ಲಾ ಮೀಸಲು ಗಾರ್ಡ್‌ಗೆ ಸೇರಿದ ಮತ್ತು ವಿಶೇಷ ಕಾರ್ಯಪಡೆಗೆ ಸೇರಿದ ಇಬ್ಬರು ಭದ್ರತಾ ಸಿಬ್ಬಂದಿ ಹುತಾತ್ಮರಾಗಿದ್ದಾರೆ ಮತ್ತು ಇಬ್ಬರು ಗಾಯಗೊಂಡಿದ್ದಾರೆ ಎಂದು ಅವರು ಹೇಳಿದರು.


ಗಾಯಗೊಂಡಿರುವ ಇಬ್ಬರು ಯೋಧರು ಅಪಾಯದಿಂದ ಪಾರಾಗಿದ್ದಾರೆ. ಚಿಕಿತ್ಸೆ ನೀಡಲು ಅವರನ್ನು ಉತ್ತಮ ವೈದ್ಯಕೀಯ ಸೌಲಭ್ಯಕ್ಕೆ ಏರ್ ಲಿಫ್ಟ್ ಮಾಡಲಾಗುತ್ತಿದೆ. ಸ್ಥಳದಲ್ಲಿ ಶೋಧ ಕಾರ್ಯಾಚರಣೆ ಇನ್ನೂ ನಡೆಯುತ್ತಿದೆ ಎಂದು ಅವರು ಹೇಳಿದರು. ಕಳೆದ ವರ್ಷ, ಛತ್ತೀಸಗಢದಲ್ಲಿ ಪ್ರತ್ಯೇಕ ಎನ್‌ಕೌಂಟರ್‌ಗಳಲ್ಲಿ ಭದ್ರತಾ ಪಡೆಗಳು 219 ನಕ್ಸಲರನ್ನು ತಟಸ್ಥಗೊಳಿಸಿದ್ದವು ಎಂದು ಪೊಲೀಸರು ತಿಳಿಸಿದ್ದಾರೆ.

# ಅನಾಥವಾಯಿತೆ ಹುಮನಾಬಾದ್ ಮತ ಕ್ಷೇತ್ರ?

ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್,ಹುಮನಾಬಾದ್ ಮತಕ್ಷೇತ್ರ ಅನಾಥವಾಯಿತೆ? ಎಂಬ ಮಾತಿಗೆ ಹೌದು ಎಂಬ ಉತ್ತರ ಹುಮನಾಬಾದ್ ನಲ್ಲಿ ದೊರಕುತ್ತಿದೆ ಎನ್ನಲಾಗಿದೆ. ಹುಮನಾಬಾದ್ ವಿಧಾನ ಸಭಾ ಕ್ಷೇತ್ರದ ಲ್ಲಿ ಬರಿ ಲ್ಯಾಂಡ್ ಡಿಲಿಂಗ್. ಬಡವರ ಜಮಿನುಗಳನ್ನು ಕಬ್ಜಾ ಮಾಡುವುದು. ಸರಾಯಿ ಮಾರಾಟ, ಅನಧಿಕೃತ ಲಾಡ್ಜ್ ನಡೆಸುವದು, ಮಟಕಾ, ಜೂಜಾಟ, ಹೀಗೆ ಹತ್ತು ಹಲವು ಅನಧಿಕೃತ ಚಟುವಟಿಕೆಗಳು ನಡೆಯುತ್ತಿವೆ. ಇವುಗಳಿಗೆ ಯಾರು ಪ್ರಸ್ನಿಸಬೇಕು. ಎಂಬ ಪ್ರಶ್ನೆ ಜನಸಾಮಾನ್ಯರದಾಗಿದೆ. ಪ್ರಶ್ನೆ ಕೇಳಿದರೆ ಕೇಳಿದವರ ಮೇಲೆ ಪ್ರಕರಣ ದಾಖಲಾಗುತ್ತದೆ. ಕಳೆದ ಎರೆಡು ವರ್ಷ ದಲ್ಲಿ ಹುಮನಾಬಾದ್ ಕ್ಷೇತ್ರ ದಲ್ಲಿ ಯಾವ ಅಭಿವೃದ್ಧಿ ಆಗಿದೆ? ಹೇಳಿಕೊಳ್ಳುವಷ್ಟು ಯಾವುದೇ ಅಭಿವೃದ್ಧಿ ಆಗಿಲ್ಲ ಎಂಬ ಮಾತು ಕೇಳಿಬರುತ್ತಿದೆ. ಇಲ್ಲಿ ಎಲ್ಲಾ ಅಡ್ಜಸ್ ಮೇಂಟ್

# ಮಣಿಪುರದಲ್ಲಿ ರಾಜಕೀಯ ಕ್ರಾಂತಿ: ಮುಖ್ಯಮಂತ್ರಿ ಬೀರೆನ್ ಸಿಂಗ್ ರಾಜೀನಾಮೆ



ಮಲ್ಲಮ್ಮ ನುಡಿ ವಾರ್ತೆ

ಇಂಪಾಲ್:ಫೆ.09: ಭಾರಿ ಹಿಂಸಾಚಾರದ ಮೂಲಕ ವಿಶ್ವದಲ್ಲಿ ಸುದ್ದಿಯಾಗಿದ್ದ ಮಣಿಪುರ ಇದೀಗ ರಾಜಕೀಯ ಕ್ಷಿಪ್ರ ಕ್ರಾಂತಿಯಿಂದ ಮತ್ತೆ ಸುದ್ದಿಯಾಗಿದೆ. ಮಣಿಪುರ ಮುಖ್ಯಮಂತ್ರಿ ಬಿರೆನ್ ಸಿಂಗ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಮಣಿಪುರ ರಾಜ್ಯಪಾಲ ಅಜಯ್ ಕುಮಾರ್ ಬಲ್ಲಾ ಭೇಟಿಯಾದ ಬಿರೆನ್ ಸಿಂಗ್ ರಾಜೀನಾಮೆ ಪತ್ರವನ್ನು ನೀಡಿದ್ದಾರೆ. ತಮ್ಮ ರಾಜೀನಾಮೆ ಪತ್ರದಲ್ಲಿ ಮಣಿಪುರ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಲು ಅವಕಾಶ ಸಿಕ್ಕಿರುವುದಕ್ಕೆ ಧನ್ಯವಾದ ಹೇಳಿದ್ದಾರೆ. ಇದೇ ವೇಳೆ ಕೆಲ ಪ್ರಮುಖ ವಿಷಯಗಳನ್ನು ರಾಜೀನಾಮೆ ಪತ್ರದಲ್ಲಿ

(2ನೇ ಪುಟ ನೋಡಿ)

# ಜಾತ್ರೆಯಲ್ಲಿ ಕಳ್ಳತನವಾದ ಕಾರು ಮಾಲೀಕನಿಗೆ ಹಸ್ತಾಂತರ: ಆರೋಪಿ ಬಂಧನ






ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ: ನಾಲವಾರ ಗ್ರಾಮದ ಕೋರಿಸಿದ್ದೇಶ್ವರ ಜಾತ್ರೆಯಲ್ಲಿ ನಿಲ್ಲಿಸಿದ್ದ ಕಾರು ಕಳ್ಳತನವಾಗಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಓರ್ವ ಆರೋಪಿಯನ್ನು ಬಂಧಿಸಿ ಇನ್ನೋವಾ ಕಾರು ಮಾಲೀಕನಿಗೆ ಹಸ್ತಾಂತರಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಆರೋಪಿ ವಿಠ್ಠಲ್ ಲಸ್ಕರೆ ಬಂಧಿತ ಆರೋಪಿ. ಇನ್ನಿತರೆ ಆರೋಪಿಗಳಾದ ಸುನೀಲ್ ಬೀಡ್, ರಾಜು ಗಾಯಕವಾಡ್, ಪ್ರಶಾಂತ, ಸಹದೇವ ತಾಂದಳೆ ಎಂಬುವವರು

(2ನೇ ಪುಟ ನೋಡಿ)

# ಆರೋಗ್ಯಕರ ಬದುಕಿಗೆ ಸಿರಿಧಾನ್ಯ ಅಗತ್ಯ



ಬೀದರ:ಫೆ.09:ರೋಗಮುಕ್ತ ಆರೋಗ್ಯಕರ ಬದುಕಿಗೆ ಸಾವಯವ ಕೃಷಿ ಹಾಗೂ ಸಿರಿಧಾನ್ಯಗಳ ಬಳಕೆ ಅತ್ಯವಶ್ಯವೆಂದು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ. ಖಂಡ್ರೆ ತಿಳಿಸಿದರು.

ಅವರು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಕೃಷಿ ಇಲಾಖೆ ಆಶ್ರಯದಲ್ಲಿ ಜಿಲ್ಲಾ ನೆಹರು ಕ್ರೀಡಾಂಗಣದಲ್ಲಿಂದು ಆಯೋಜಿಸಲಾದ ಜಿಲ್ಲಾ ಮಟ್ಟದ ಸಾವಯವ ಮತ್ತು ಸಿರಿಧಾನ್ಯ ಮೇಳವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅಧುನಿಕ ಕಾಲದಲ್ಲಿ ಎಲ್ಲೆಡೆ ಮಾಲಿನ್ಯ ಕಾಣುತ್ತಿದ್ದೇವೆ, ಪ್ರಕೃತಿ ವಿಕೋಪ, ಬರಗಾಲ, ಪ್ರವಾಹ, ಹವಮಾನ ವೈಪರಿತ್ಯ ನಂತಹ

(2ನೇ ಪುಟ ನೋಡಿ)

# ಹುಮನಾಬಾದ್ ಎಪಿಎಂಸಿಯಲ್ಲಿ ಸರ್ಕಾರಕ್ಕೆ ಮೋಸ

ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್:ಫೆ.9: ಇಲ್ಲಿನ ಎಪಿಎಂಸಿಯಲ್ಲಿ ಕಾಳ ಸಂತೆಯಲ್ಲಿ ರೈತರು ಮಾರಿರುವ ವಿವಿಧ ಬಗೆಯ ಬೀಜಗಳನ್ನು ಕಾಳಸಂತೆಯಲ್ಲಿ ಅನಧಿಕೃತ ವಾಗಿ ಮಾರಾಟ ಮಾಡಲಾಗುತ್ತಿದೆ ಎಂಬ ಮಾತು ಕೇಳಿಬರುತ್ತಿದೆ. ರೈತರಿಂದ ಖರೀದಿ ಮಾಡಿದ ಮಾಲನ್ನು ಎಪಿಎಂಸಿ ಅಧಿಕಾರಿಗಳ ಗಮನಕ್ಕೆ ತರದೇ ಕಾಳಸಂತೆಯಲ್ಲಿ ಮಾರುವುದರ ಮೂಲಕ ಸರ್ಕಾರಕ್ಕೆ ಕೊಟ್ಯಾಂತರ ರೂಪಾಯಿ ಲಾಸ್ ಮಾಡುತ್ತಿದ್ದಾರೆ. ಇದರಲ್ಲಿ ಎಪಿಎಂಸಿ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಶಾಮೀಲಾಗಿರುವುದಾಗಿ ತಿಳಿದುಬಂದಿದೆ. ಬೇಲಿನೇ ಎದ್ದು ಹೊಲ ಮೇದರೆ ಹೇಗೆ ಎಂಬ ಚರ್ಚೆ ನಡೆಯುತ್ತಿದೆ.

# ಕಲ್ಯಾಣ ಕರ್ನಾಟಕ ಹಸರೀಕರಣಕ್ಕೆ ಒತ್ತು



ಮಲ್ಲಮ್ಮ ನುಡಿ ವಾರ್ತೆ

ಬೀದರ: ಫೆ.09: ಕಲ್ಯಾಣ ಕರ್ನಾಟಕದಲ್ಲಿ ಸಧ್ಯ ಶೇ. 5 ರಷ್ಟು ಹಸಿರು ಹೊದಿಕೆಯ ಇದ್ದು, ಹಸರೀಕರಣ ಹೆಚ್ಚಳಕ್ಕೆ ವಿಶೇಷ ಕಾರ್ಯಕ್ರಮ ಹಮ್ಮಿಕೊಂಡಿದ್ದು ಬೀದರ ಜಿಲ್ಲೆಗೆ 20 ಕೋಟಿ ಹಾಗೂ ಕಲಬುರಗಿ ಜಿಲ್ಲೆಗೆ 10 ಕೋಟಿ ರೂ. ಅನುದಾನ ಮಂಜೂರು ಮಾಡಲಾಗಿದೆ. ಈ ಭಾಗದ ಎಲ್ಲ ಅರಣ್ಯ ಸಿಬ್ಬಂದಿಗಳು ಹಾಗೂ ಅಧಿಕಾರಿಗಳು ಜವಾಬ್ದಾರಿಯಿಂದ ಪ್ರಮಾಣಿಕವಾಗಿ ಹಸಿರು ಹೊದಿಕೆ ಹೆಚ್ಚಿಸುವಲ್ಲಿ ಸಕ್ರಿಯವಾಗಿ ಶ್ರಮಿಸಬೇಕೆಂದು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ. ಖಂಡ್ರೆ ತಿಳಿಸಿದರು.

ಅವರು ಇಂದು ಗುರುದ್ವಾರ ಹತ್ತಿರದ ಲಾವಣ್ಯ ಕಲ್ಯಾಣ ಮಂಟಪದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅರಣ್ಯ ಇಲಾಖೆ ನೌಕರರ ಸಂಘದ ವತಿಯಿಂದ ಹಮ್ಮಿಕೊಂಡಿದ್ದ 2025ನೇ ಸಾಲಿನ ದಿನಚರಿ ಹಾಗೂ ದಿನದರ್ಶಿಕೆ ಬಿಡುಗಡೆಗೊಳಿಸಿ ಮಾತನಾಡಿದರು.

ಪಶ್ಚಿಮ ಘಟ್ಟ ಪ್ರದೇಶಕ್ಕೆ ಹೋಲಿಸಿದರೆ ಕಲ್ಯಾಣ ಕರ್ನಾಟಕದಲ್ಲಿ ಹಸಿರು ಹೊದಿಕೆ ತೀರ ಕಡಿಮೆಯಿದೆ. ಈ ಭಾಗದಲ್ಲಿ ಹಸಿರು ಹೊದಿಕೆ ಹೆಚ್ಚಿಸುವುದು ದೊಡ್ಡ ಸವಾಲಾಗಿದೆ. ಸಧ್ಯ ಶೇ. 5% ಅರಣ್ಯ ಕ್ಷೇತ್ರವಿದ್ದು ಮುಂಬರುವ 3 ವರ್ಷಗಳಲ್ಲಿ ಶೇ. 10% ರಷ್ಟು ಹಸಿರು ಹೊದಿಕೆ ಹೆಚ್ಚಿಸುವಲ್ಲಿ ಅರಣ್ಯ ಸಿಬ್ಬಂದಿಗಳು, ಅಧಿಕಾರಿಗಳು ಯೋಜನಾಬದ್ಧವಾಗಿ ಪ್ರಮಾಣಿಕ ಶ್ರಮಿಸಬೇಕೆಂದರು.

ಕಂದಾಯ ಭೂಮಿಗಳಲ್ಲಿ ಗಿಡ, ಮರಗಳನ್ನು ನೆಡುವ ಕಾರ್ಯ ಯುದ್ಧೋಪಾದಿಯಲ್ಲಿ ಕೈಗೊಳ್ಳಬೇಕಿದೆ. ಈ ಭಾಗದ 41 ಕ್ಷೇತ್ರ 41 ಸಾವಿರ ಕಿ.ಮೀ. ರಸ್ತೆ ಬದಿಗಳಲ್ಲಿ ಎತ್ತರದ ಸಸಿಗಳನ್ನು ನೆಡಲಾಗುವುದು, ಕೆರೆಗಳ ಸುತ್ತ, ಶಾಲಾ ಆವರಣಗಳಲ್ಲಿ ರೈತರ

(2ನೇ ಪುಟ ನೋಡಿ)

# ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ 200 ಕೆ.ಪಿ.ಎಸ್. ಮಾದರಿ ಶಾಲೆ ಸ್ಥಾಪನೆಗೆ ಚಿಂತನೆ ಪ್ರಸಕ್ತ ವರ್ಷವು ಸಹ 5,000 ಕೋಟಿ ರೂ. ಹಣ ಘೋಷಣೆ ಸಾಧ್ಯತೆ:ಡಾ.ಅಜಯ್ ಸಿಂಗ್

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಫೆ.09: ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಗ್ರಾಮೀಣ ಭಾಗದ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ನೀಡುವ ನಿಟ್ಟಿನಲ್ಲಿ ಕ.ಕ.ಪ್ರದೇಶದ 200 ಕಡೆ ಕೆ.ಪಿ.ಎಸ್. ಮಾದರಿಯ ಕರ್ನಾಟಕ ಪಬ್ಲಿಕ್ ಶಾಲೆ ಸ್ಥಾಪನೆಗೆ ಚಿಂತನೆ ನಡೆದಿದೆ ಎಂದು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಡಾ.ಅಜಯ್ ಸಿಂಗ್ ಹೇಳಿದರು.

ರವಿವಾರ ಇಲ್ಲಿನ ಮಂಡಳಿ ಸಭಾಂಗಣದಲ್ಲಿ ಮಂಡಳಿಯ ಪ್ರಗತಿ ಕಾರ್ಯ ವಿವರಿಸಲು ಕರೆದ ಪತ್ರಿಕಾಗೋಷ್ಠಿಯಲ್ಲಿ



ಮಾತನಾಡಿದ ಅವರು, ಮುಂಬರುವ 2025-26ರ ಆಯವ್ಯದಯಲ್ಲಿ ಈ ಬಗ್ಗೆ ಘೋಷಣೆಯಾಗಲಿದೆ. ಸಿ.ಎಸ್.ಆರ್. ನಿಧಿ ಬಳಸಿಕೊಂಡು ಶಾಲಾ ಶಿಕ್ಷಣ ಇಲಾಖೆ ಸಹಯೋಗದೊಂದಿಗೆ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ 4-5 ಶಾಲೆಗಳನ್ನು ತಲಾ 5 ಕೋಟಿ ರೂ. ವೆಚ್ಚದಲ್ಲಿ ಸ್ಥಾಪಿಸಲು ಉದ್ದೇಶಿಸಿದ್ದು, ಮಾರ್ಚ್ ನಂತರ ನಡೆಯುವ ಮಂಡಳಿ ಸಭೆಯಲ್ಲಿ ಇದರ ಬಗ್ಗೆ ಅಂತಿಮ ನಿರ್ಣಯ ಕೈಗೊಳ್ಳಲಾಗುವುದು. ನಗರವಾಸಿ ಮಕ್ಕಳಂತೆ ಹಳ್ಳಿ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ಸಿಗಬೇಕೆಂಬುದು ನಮ್ಮ ಉದ್ದೇಶವಾಗಿದೆ ಎಂದರು.

ಕಳೆದ ವರ್ಷ ದಾಖಲೆ ಪ್ರಮಾಣದಲ್ಲಿ ರಾಜ್ಯ ಸರ್ಕಾರವು ಮಂಡಳಿಗೆ 5,000 ಕೋಟಿ ರೂ. ಅನುದಾನ ಹಂಚಿಕೆ ಮಾಡಿದ್ದು, ಅದರಲ್ಲಿ ಇದೂವರೆಗೆ 4,500 ಕೋಟಿ ರೂ. ಮೊತ್ತದ ಕ್ರಿಯಾ ಯೋಜನೆಗೆ ಅನುಮತಿ ಸಿಕ್ಕಿದೆ. ಈ ವರ್ಷ ಸಹ 5,000 ಕೋಟಿ ರೂ. ಘೋಷಣೆಗೆ ಇತ್ತೀಚೆಗೆ ಆಯವ್ಯಯಕ್ಕೆ ಪೂರ್ವಭಾವಿಯಾಗಿ ನಡೆದ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರಲ್ಲಿ ವಿನಂತಿ ಮಾಡಿಕೊಂಡಿದ್ದು, ಅಷ್ಟು ಹಣ ಘೋಷಿಸುವುದಾಗಿ ಅವರು ಭರವಸೆ ನೀಡಿದ್ದಾರೆ ಎಂದರು.

ಮಂಡಳಿಗೆ ನೀಡಲಾಗುವ ಹಣ ಸಂಪೂರ್ಣವಾಗಿ ಖರ್ಚು ಮಾಡಲು ಪ್ರತ್ಯೇಕ 229 ಇಂಜಿನೀಯರ್ ಒಳಗೊಂಡ ಇಂಜಿನೀಯರಿಂಗ್ ವಿಂಗ್ ಸ್ಥಾಪನೆ ಕುರಿತು ಸಿ.ಎಂ. ಜೊತೆ ಚರ್ಚಿಸಲಾಗಿದೆ. ಇದಲ್ಲದೆ ಮಂಡಳಿಯಲ್ಲಿನ ಖಾಲಿ ಹುದ್ದೆಗಳ ಭರ್ತಿಗೂ ಕ್ರಮ ವಹಿಸಲಾಗುವುದು

(2ನೇ ಪುಟ ನೋಡಿ)

## ಒಂದನೇ ಪುಟದಿಂದ

## ಪ್ರಸಕ್ತ ವರ್ಷವು ಸಹ 5,000 ಕೋಟಿ ರೂ. ಹಣ ಘೋಷಣೆ ಸಾಧ್ಯತೆ:ಡಾ.ಅಜಯ್ ಸಿಂಗ್

ಎಂದು ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಡಾ.ಅಜಯ್ ಸಿಂಗ್ ಅವರು, ರಾಜ್ಯದಲ್ಲಿ ಪ್ರಾದೇಶಿಕ ಅಸಮಾನತೆ ನಿವಾರಣೆ ನಿಟ್ಟಿನಲ್ಲಿ ಆರ್ಥಿಕ ತಜ್ಞ ಪ್ರೊ.ಗೋವಿಂದರಾವ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚನೆಯಾಗಿದ್ದರಿಂದ, ಅವರೊಂದಿಗೂ ಪ್ರದೇಶದ ಅಭಿವೃದ್ಧಿ ಕುರಿತಂತೆ ಸಮಾಲೋಚನೆ ಮಾಡಲಾಗಿದೆ ಎಂದರು.ಕಳೆದ ಸೆಪ್ಟೆಂಬರ್ 17 ರಂದು ಕಲಬುರಗಿಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಮಂಡಳಿಯ 857 ಕೋಟಿ ರೂ. ಗಳ ಕಾಮಗಾರಿಗಳಿಗೆ ಸಚಿವ ಸಂಪುಟ ಅನುಮೋದನೆ ನೀಡಿದ ಪರಿಣಾಮ ಇಂದು 439 ಕೋಟಿ ರೂ. ವೆಚ್ಚದ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ನಗರ ಆರೋಗ್ಯ ಉಪ ಕೇಂದ್ರ ನಿರ್ಮಾಣ, ದುರಸ್ತಿ, ಅಂಬುಲೆನ್ಸ್ ಸೇವೆ ಒದಗಿಸಲು ಟೆಂಡರ್ ಪ್ರಕ್ರಿಯೆ ನಡೆ–ಯುತ್ತಿದೆ ಎಂದರು.ಇದಲ್ಲದೆ 50–50 ಅನುಪಾತ ಅನುದಾನದಡಿ ಅಲ್ಪಸಂಖ್ಯಾತ ಇಲಾಖೆಯ ಸಹಯೋಗದಡಿ 48 ಮೌಲಾನಾ ಅಜಾದ್, ಮೋರಾರ್ಜಿ ದೇಸಾಯಿ ವಸತಿ ಶಾಲೆ ಸ್ಥಾಪನೆ, 34 ಬಿ.ಸಿ.ಎಂ. ಹಾಸ್ಟೆಲ್ ಸ್ಥಾಪನೆ, 186 ಕೋಟಿ ರೂ. ಮೊತ್ತದ ಎಸ್.ಸಿ.–ಎಸ್.ಟಿ ಹಾಸ್ಟೆಲ್ ನಿರ್ಮಿಸಲಾಗುತ್ತಿದೆ. ಕಲ್ಯಾಣ ಪಥ ಯೋಜನೆಯಡಿ ಗ್ರಾಮೀಣ ರಸ್ತೆ ನಿರ್ಮಾಣಕ್ಕೆ 330 ಕೋಟಿ ರೂ. ಮಂಡಳಿ ನೀಡಿದ್ದು, ಶೀಘ್ರವೇ ಸಿ.ಎಂ. ಚಾಲನೆ ನೀಡಲಿದ್ದಾರೆ. ಕಂದಾಯ ಇಲಾಖೆ–ಕೆ.ಕೆಆರ್.ಡಿ.ಬಿ. ಸಹಭಾಗಿತ್ವದಲ್ಲಿ ಪ್ರದೇಶದ ನೂತನ 16 ತಾಲೂಕಿನಲ್ಲಿ ತಲಾ 8.60 ಕೋಟಿ ರೂ. ವೆಚ್ಚದಲ್ಲಿ ಮಿನಿ ವಿಧಾನ ನಿರ್ಮಾಣಕ್ಕೂ ಟೆಂಡರ್ ಕರೆಯಲಾಗಿದ್ದು, ಮುಂದಿನ ದಿನದಲ್ಲಿ ಅಭಿವೃದ್ಧಿ ಚಿತ್ರಣ ಕಾಣಬಹುದಾಗಿದೆ ಎಂದರು.ಡಾ.ಛಾಯಾ ದೇಗಾಂವಕರ್ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿ ರಚನೆ: ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಮಗ್ರ ಶಿಕ್ಷಣ ಅಭಿವೃದ್ಧಿಗೆ ಡಾ.ಛಾಯಾ ದೇಗಾಂವಕರ್ ನೇತೃತ್ವದಲ್ಲಿ 8 ಜನರ ಶಿಕ್ಷಣ ತಜ್ಞರ ಸಮಿತಿಯನ್ನು ಸರ್ಕಾರ ರಚಿಸಿದೆ. ಬೀದರಿನ ಡಾ.ಅಬ್ದುಲ್ ಖದೀರ್ ಮತ್ತು ಮಲ್ಲಿಕಾರ್ಜುನ ಎಂ.ಎಸ್., ಬಳ್ಳಾರಿಯ ಫ್ರಾನ್ಸಿಸ್ ಬಾಷ್ಯಮ್, ಕಲಬುರಗಿಯ ರುದ್ರೇಶ್ ಎಸ್., ಎನ.ಬಿ.ಪಾಟೀಲ, ಯಶವಂತ ಹರಸೂರ ಹಾಗೂ ಡಾ.ನಾಗಾಬಾಯಿ ಬುಳ್ಳಾ ಅವರು ಸಮಿತಿಯಲ್ಲಿದ್ದು, 2 ವರ್ಷದಲ್ಲಿ ವರದಿ ನೀಡಲು ನೂತನ ತಜ್ಞರ ಸಮಿತಿಗೆ ಸೂಚಿಸಲಾಗಿದೆ. ತ್ವರಿತ ಬದಲಾವಣೆಗೆ ಅಲ್ಪಾವಧಿ ಮತ್ತು ದೀರ್ಘಾವಧಿಯ ಕೋರ್ಸ್‌ಗಳನ್ನು ಪರಿಚಯಿಸುವಂತೆ ಸಹ ತಿಳಿಸಿದೆ ಎಂದ ಕೆ.ಕೆ. ಆರ್.ಡಿ.ಬಿ. ಅಧ್ಯಕ್ಷ ಡಾ.ಅಜಯ್ ಸಿಂಗ್ ಅವರು, ಮುಂದಿನ ದಿನದಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಗಮನಾರ್ಹ ಪ್ರಗತಿ ಕಾಣಲು ಆರೋಗ್ಯ ಸಮಿತಿ ಸಹ ರಚಿಸಲಾಗುವುದು ಎಂದರು.

ಅಕ್ಷರ ಆವಿಷ್ಕಾರ ಮುಂದುವರಿಕೆ: ಮಂಡಳಿಯಿಂದ ಕಳೆದ 2023–24 ಮತ್ತು 2024–25ನೇ ವರ್ಷವನ್ನು ಶೈಕ್ಷಣಿಕ ವರ್ಷವೆಂದು ಘೋಷಿಸಿ ಅಕ್ಷರ ಆವಿಷ್ಕಾರ ಕಾರ್ಯಕ್ರಮದ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ ಸುಧಾರಣೆಗೆ ಹೆಚ್ಚಿನ ಒತ್ತು ನೀಡಿದೆ. ಇದರಿಂದ 6,538 ಶಾಲೆಗಳಿಗೆ ದುರಸ್ತಿ ಭಾಗ್ಯ ಒಲಿದಿದೆ. ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಲಾಗಿದೆ. ರಾಜ್ಯದಲ್ಲಿ ಪ್ರಥಮವಾಗಿ ಕ.ಕ. ಭಾಗದಲ್ಲಿ 1,008 ಶಾಲೆಗಳಲ್ಲಿ ಎಲ್.ಕೆ.ಜಿ., ಯು.ಕೆ.ಜಿ. ತರಗತಿ ಆರಂಭಿಸಲಾಗಿದೆ. ಹೀಗಾಗಿ ಮುಂದಿನ 2025–26 ವರ್ಷದಲ್ಲಿಯೂ ಸಹ ಅಕ್ಷರ ಆವಿಷ್ಕಾರ ಕಾರ್ಯಕ್ರಮಗಳು ಮುಂದುವರೆಯಲಿವೆ ಎಂದು ಡಾ.ಅಜಯ್ ಸಿಂಗ್ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮಂಡಳಿ ಕಾರ್ಯದರ್ಶಿ ಎಂ.ಸುಂದರೇಶ ಬಾಬು ಇದ್ದರು.

## ಸಚಿವ ಈಶ್ವರ ಖಂಡ್ರೆ

ಜಮೀನುಗಳಲ್ಲಿ ಸಸಿಗಳನ್ನು ನೆಟ್ಟು ಸಂರಕ್ಷಿಸಿ ಹಸರೀಕರಣ ಹೆಚ್ಚಳ ಮಾಡಬೇಕೆಂದು ಸಚಿವರು ತಿಳಿಸಿದರು. ನಿನ್ನೆ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಉನ್ನತ ಅರಣ್ಯ ಅಧಿಕಾರಿಗಳ ಸಭೆಯಲ್ಲಿ ರಾಜ್ಯದ ಒಟ್ಟು ಬಜೆಟ್‌ನ ಶೇ. 1% ಅನುದಾನವನ್ನು ಈ ಬಾರಿ ಅರಣ್ಯ ಇಲಾಖೆಗೆ ನೀಡುವಂತೆ ತಾವು ಮುಖ್ಯಮಂತ್ರಿಗಳಿಗೆ ಮನವರಿಕೆ ಮಾಡಿಕೊಟ್ಟಿದೆಯೆಂದ ಸಚಿವರು ಇದ–ರಿಂದಾಗಿ ಸುಮಾರು 4 ಸಾವಿರ ಕೋಟಿ ಅನುದಾನ ದೊರೆಯುವ ಸಾಧ್ಯತೆ ಇದೆಯೆಂದರು. ಬರುವ ವರ್ಷ ಕಲ್ಯಾಣ ಕರ್ನಾಟಕ ಭಾಗಕ್ಕೆ 300 ಕೋಟಿ ರೂ. ಅನುದಾನ ಹೆಚ್ಚಿಗೆ ನೀಡುವಂತೆ ಕೇಳಲಾಗಿದೆ. ಅಲ್ಲದೆ ಕೆಕೆಆರ್‌ಡಿಬಿ ಯಿಂದ 150 ಕೋಟಿ ರೂ. ಅನುದಾನ ದೊರೆಯಲಿದೆ. ಬೀದರನಲ್ಲಿ ಕೃಷ್ಣಮೃಗ ಸಂರಕ್ಷಿತ ಧಾಮ ಆಗಲಿದೆ. ಪರಿಸರ ಪ್ರವಾಸೋದ್ಯಮ ಆರಂಭಗೊಳ್ಳಲಿದೆ. ಪಕ್ಷಿಧಾಮವನ್ನು ಸಹ ನಿರ್ಮಿಸಲಾಗುತ್ತಿದೆಯೆಂದರು. ಹಸರೀಕರಣಕ್ಕೆ ಹಾಗೂ ವನ್ಯಜೀವಿ ಸಂರಕ್ಷಣೆಯಲ್ಲಿ ಶ್ರಮಿಸುತ್ತಿರುವ ಅರಣ್ಯ ನೌಕರರ ಸೇವೆ ಶ್ಲಾಘನೀಯವಾಗಿದೆ ಎಂದರು. ಕಲ್ಯಾಣ ಕರ್ನಾಟಕ ಪ್ರದೇಶ ಅರಣ್ಯ ಇಲಾಖೆ ನೌಕರರು ಸಲ್ಲಿಸಿದ ಮನವಿಗೆ ಸ್ಪಂದಿಸಿದ ಸಚಿವರು ಈ ಭಾಗದಲ್ಲಿ ಎಲ್ಲ ಸ್ಥರದ ಹುದ್ದೆಗಳಿಗೆ ಈಗಾಗಲೇ ಮುಂಬಡ್ತಿ ನೀಡಲಾಗಿದೆ. ಈ ಭಾಗದಲ್ಲಿ ಹೆಚ್ಚಿನ ಹುದ್ದೆಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು. ಪಶ್ಚಿಮಘಟ್ಟ ಹಾಗೂ ಅರಣ್ಯ ಪ್ರದೇಶ ಹೆಚ್ಚಿರುವ ಜಿಲ್ಲೆಗಳಲ್ಲಿ ಇರುವ ಅನಾವಶ್ಯಕವಿರುವ ಹುದ್ದೆ ಹಾಗೂ ಸಿಬ್ಬಂದಿಗಳನ್ನು ಕಲ್ಯಾಣ ಕರ್ನಾಟಕ ಭಾಗಕ್ಕೆ ಸ್ಥಳಾಂತರಿಸಲಾಗುವುದೆಂದರು. ಕಲ್ಯಾಣ ಕರ್ನಾಟಕದ ಭಾಗದಲ್ಲಿ ಕಾನೂನಿನ ಪ್ರಕಾರ ದೊರೆಯಬೇಕಾದ ಶೇ. 8% ರಷ್ಟು ಅಧಿಕಾರಿಗಳ ಮುಂಬಡ್ತಿಯನ್ನು ಕಡ್ಡಾಯವಾಗಿ ನೀಡುವಂತೆ ಉನ್ನತ ಅಧಿಕಾರಿಗಳಿಗೆ ಸೂಚಿಸಲಾಗುವುದೆಂದು ಸಚಿವರು ಹೇಳಿದರು. ಈ ಭಾಗದಲ್ಲಿ ಹಸಿರು ಹೊದಿಕೆ ಕಾರ್ಯವನ್ನು ಸವಾಲಾಗಿ ಸ್ವೀಕರಿಸಿ ಎಲ್ಲ ಸಿಬ್ಬಂದಿಗಳು ಪ್ರಮಾಣಿಕವಾಗಿ ಕಾರ್ಯನಿರ್ವಹಿಸಿದಲ್ಲಿ ಇಲಾಖೆಯಿಂದ ಸಹ ತಕ್ಕ ಪ್ರೋತ್ಸಾಹ ನೀಡಲಾಗುವುದೆಂದು ಸಚಿವರು ಭರವಸೆ ನೀಡಿದರು. ಇದೇ ಸಂದರ್ಭದಲ್ಲಿ ಗುಲಬರ್ಗಾ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಸುನಿಲ ಪನವಾರ ಅವರ ಕಾರ್ಯ ಹಾಗೂ ದಕ್ಷತೆಯನ್ನು ಸಚಿವರು ಶ್ಲಾಘಿಸಿದರು. ಕಲ್ಯಾಣ ಕರ್ನಾಟಕ ಪ್ರದೇಶ ನೌಕರರ ಸಂಘದ ಅಧ್ಯಕ್ಷರಾದ ಸಾಮಾಜಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಎ.ಬಿ.ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿ ತಮ್ಮ ಮನವಿಯನ್ನು ಸಲ್ಲಿಸಿದರು. ಐದು ಜಿಲ್ಲೆಗಳ ಅರಣ್ಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಬದುಕಿಗೆ ಸಿರಿಧಾನ್ಯ ಅಗತ್ಯ

ಅಗಾಧ ಪರಿಸ್ಥಿತಿಯಲ್ಲಿ ಜನರು ಒತ್ತಡದ ಜೀವನ ಸಾಗಿಸುತ್ತಿದ್ದಾರೆ. ವಿವಿಧ ರೋಗಗಳಿಗೆ ಅಂಟಿಕೊಂಡಿದ್ದಾ–ರೆ. ಆದ್ದರಿಂದ ಗುಣಮಟ್ಟದ ಸತ್ವಯುತ ಆಹಾರ ಧಾನ್ಯ ಬಳಕೆ ಅಗತ್ಯವಾಗಿದೆ. ಸಾರ್ವಜನಿಕರು ಸಾವಯವ ಕೃಷಿ ಹಾಗೂ ಸಿರಿಧಾನ್ಯ ಬಳಕೆಯಿಂದ ಆರೋಗ್ಯಕರ ಜೀವನ ನಡೆಸಬಹುದೆಂದು ಸಚಿವರು ನುಡಿದರು.

ಸರಕಾರವು ಈ ನಿಟ್ಟಿನಲ್ಲಿ ಸಾವಯವ ಕೃಷಿಗೆ ಹೆಚ್ಚು ಒತ್ತು ನೀಡಿದ್ದು ಸಿರಿಧಾನ್ಯ ಬಳಕೆಗೆ ಪ್ರಶಸ್ತ ?? ನೀಡಿದೆ. ಎಲ್ಲ ಜಿಲ್ಲೆಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದೇವೆ ಎಂದರು. ನಮ್ಮ ಪೂರ್ವಜರು ಪರಿಸರಪೂರಕ ಸಾವಯವ ಕೃಷಿಗೆ ಒತ್ತು ನೀಡಿದ್ದರು. ಉತ್ತಮ ಗುಣಮಟ್ಟದ ಆಹಾರ ಧಾನ್ಯ ಬಳಸುತ್ತಿದ್ದರು. ಪೌಷ್ಠಿಕಾಂಶ ಭರಿತ ಸಿರಿಧಾನ್ಯಗಳು ಉಳಿದೆಲ್ಲ ಧಾನ್ಯಗಳಿಗಿಂತ ಶ್ರೇಷ್ಠ. ಎಲ್ಲ ಹವಾಮಾನಕ್ಕೂ ಹೊಂದಿಕೊಂಡು ಬೆಳೆಯುವ, ಕೀಟ ಹಾಗೂ ರೋಗವಿಲ್ಲದೆ ರಸಾಯನಿಕ ಮುಕ್ತವಾಗಿ ಬೆಳೆದು ಉತ್ತಮ ಆರೋಗ್ಯ ನಿರ್ಮಾಣಕ್ಕೆ ಸಹಾಯವಾಗುತ್ತವೆ. ಸಿರಿಧಾನ್ಯಗಳನ್ನು ಪ್ರತಿನಿತ್ಯ ಬಳಸುವುದರಿಂದ ಅನೇಕ ರೋಗಗಳು ವಾಸಿಯಾದ ಉದಾಹರಣೆಗಳಿವೆ ಎಂದು ಸಚಿವರು ತಿಳಿಸಿದರು.

ಈಗ ಕೃಷಿ ಕ್ಷೇತ್ರವು ಕವಲು ದಾರಿಯಲ್ಲಿದೆ, ರೈತರ ಬೆಳೆಗೆ ಸರಿಯಾದ ಬೆಂಬಲ ಬೆಲೆ ದೊರೆಯಬೇಕಿದೆ, ಸ್ವಾಮಿನಾಥನ್ ಆಯೋಗದ ಪ್ರಕಾರ ವೈಜ್ಞಾನಿಕ ಬೆಲೆ ನಿಗದಿಯಾಗಬೇಕಿದೆ ಎಂದರು.

ಕೃಷಿ ಹೆಚ್ಚು ಲಾಭದಾಯಕ ಆಗುವ ನಿಟ್ಟಿನಲ್ಲಿ ರೈತರೇ ಕಾಲಕ್ಕನುಗುಣವಾಗಿ ಯಾವ ಬೆಳೆ ಬೆಳೆಯಬೇಕೆಂಬುದನ್ನು ವಿಜ್ಞಾನಿಗಳನ್ನು ಸಂಪರ್ಕಿಸಿ ಆರ್ಥಿಕವಾಗಿಯೂ ಸದೃಢವಾಗಬೇಕಿದೆ. ಸಿರಿಇಧಾನ್ಯ ಬಳಕೆಗೆ ಹೆಚ್ಚಿನ ಜಾಗೃತಿ ಮೂಡಿಸುವ ಅಗತ್ಯವಿದೆ. ಸಾವಯವ ಕೃಷಿ ವಿಸ್ತರಣೆಗೆ ರೈತರು ಸಿದ್ದರಾಗಬೇಕಿದೆ. ಈ ನಿಟ್ಟಿನಲ್ಲಿ ಕೃಷಿ ಸಖಿಯರು ಗ್ರಾಮಗಳಲ್ಲಿ ಹೆಚ್ಚೆಚ್ಚು ತಿಳುವಳಿಕೆ ಮೂಡಿಸಬೇಕೆಂದು ಸಚಿವರು ತಿಳಿಸಿದರು.

ಬೀದರ ದಕ್ಷಿಣ ಶಾಸಕರಾದ ಡಾ.ಶೈಲೇಂದ್ರ ಕೆ.ಬೆಲ್ದಾಳೆ ಅವರು ಮಾತನಾಡಿ, ಸಾವಯವ ಕೃಷಿ ಮಿಷನ ರಾಜ್ಯದ ರೈತರಿಗೆ ಮತ್ತೊಮ್ಮೆ ಸಿಗುವಂತಾಲಿ. ರಾಜ್ಯದ ಎಲ್ಲಾ ರೈತರು ಸಾವಯವ ಕೃಷಿ ಬೆಳೆದು ಒಳ್ಳೆಯ ಬೆಲೆ ಸಿಗುವಂತಾಗಲಿ ಎಂದರು.

ಇದೇ ಸಂದರ್ಭದಲ್ಲಿ ಕಾರ್ಯಕ್ರಮದಲ್ಲಿ ಅಳವಡಿಸಲಾಗಿರುವ ವಿವಿಧ ಮಳಿಗೆಗಳಿಗೆ ಸಚಿವರು ಭೇಟಿ ನೀಡಿದರು.

ಈ ಕಾರ್ಯಕ್ರಮದಲ್ಲಿ ಬೀದರ ನಗರಸಭೆ ಅಧ್ಯಕ್ಷರಾದ ಮಹ್ಮದ ಗೌಸ್, ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಸಿದ್ರಾಮಯ್ಯ ಸ್ವಾಮಿ, ಕರ್ನಾಟಕ ಪ್ರದೇಶ ಕೃಷಿಕ ಸಮಾಜ ಬೆಂಗಳೂರು ರಾಜ್ಯ ಪ್ರತಿನಿಧಿಯಾದ ವಿಶ್ವನಾಥ ಪಾಟೀಲ, ಜಿಲ್ಲಾಧಿಕಾರಿಗಳಾದ ಶಿಲ್ಪಾ ಶರ್ಮಾ, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಗಿರೀಶ ಬದೋಲೆ, ಕೃಷಿ ಇಲಾಖೆ ಜಂಟಿ ನಿರ್ದೇಶಕರಾದ ಜಿಯಾವುಲ್ಲಾ ಕೆ., ಕೃಷಿ ಸಂಶೋಧನಾ ಕೇಂದ್ರದ ಮುಖ್ಯಸ್ಥರಾದ ಡಾ.ಭವಾನಿ ಕೆ, ಡಾ.ಸುನಿಲಕುಮಾರ ಎನ್.ಎಮ್., ಕೃಷಿ ಇಲಾಖೆ ಉಪನಿರ್ದೇಶಕರಾದ ಸೋಮಶೇಖರ ಬಿರಾದಾರ, ಸಹಾಯಕ ನಿರ್ದೇಶಕರಾದ ಅನ್ಸಾರಿ ಸೇರಿದಂತೆ ಕೃಷಿ ಸಖಿಯರು, ರೈತ ಮುಖಂಡರು, ರೈತರು ಸೇರಿದಂತೆ ಕೃಷಿ ಇಲಾಖೆ ಸಿಬ್ಬಂದಿಗಳು ರೈತರು ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಕಾರು ಮಾಲೀಕನಿಗೆ ಹಸ್ತಾಂತರ: ಆರೋಪಿ ಬಂಧನ

ಕಳ್ಳತನದಲ್ಲಿ ಭಾಗಿಯಾಗಿದ್ದು, ಬದಾಮಿಯ ಬನಶಂಕರಿ ಮತ್ತು ಆಂಧ್ರಪ್ರದೇಶದ ಎಮ್ಮಿಗನೂರ್ ಜಾತ್ರೆಯಲ್ಲೂ ಕಾರುಗಳನ್ನು ಕಳವು ಮಾಡಿರುವುದಾಗಿ ವಿಚಾರಣೆ ವೇಳೆ ಬಂಧಿತ ಆರೋಪಿ ಬಾಯಿ ಬಿಟ್ಟಿದ್ದು ಇನ್ನುಳಿದ ಆರೋಪಿಗಳ ಪತ್ತೆಗೆ ಪೊಲೀಸರು ಮುಂದಾಗಿದ್ದಾರೆ ಎಂದು ಕಲಬುರಗಿ ಎಸ್.ಪಿ ಅಡ್ಡೂರು ಶ್ರೀನಿವಾಸಲು ಮಾಹಿತಿ ನೀಡಿದ್ದರು.

ಜ.30ರಂದು ನಾಲವಾರ ಗ್ರಾಮದ ಕೋರಿಸಿದ್ದೇಶ್ವರ ಜಾತ್ರೆಯಲ್ಲಿ ನಿಲ್ಲಿಸಿದ್ದ ಕಾರು ಕಳ್ಳತನವಾಗಿರುವ ಬಗ್ಗೆ ವಾಡಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿತ್ತು.

## ಹುಮನಾಬಾದ್ ಮತ ಕ್ಷೇತ್ರ?

ರಾಜಕೀಯ ನಡೆಯುವುದರಿಂದ ಹುಮನಾಬಾದ್ ಕ್ಷೇತ್ರ ಸಾಕಷ್ಟು ಹಿಂದೆ ಸರಿದಿದೆ. ಸಮಸ್ಯೆಗಳು. ಕುಡಿಯುವ ನೀರು, ಚರಂಡಿಗಳಿಲ್ಲ, ವಿದ್ಯುತ್ ದೀಪಗಳಿಲ್ಲ, ಸರಕಾರಿ ಕಛೇರಿಗಳಲ್ಲಿ ಸಾರ್ವಜನಿಕರಿಗೆ ಕಿಮ್ಮತ್ತಿಲ್ಲ. ಹಾಗಾಗಿ ಹುಮನಾಬಾದ್ ವಿಧಾನ ಸಭಾ ಕ್ಷೇತ್ರ ಅನಾಥವಾಗಿದೆ ಎಂಬುವುದರಲ್ಲಿ ಯಾವುದೆ ಸಂದೆಹವಿಲ್ಲ, ಎಂಬ ಚರ್ಚೆ ಕ್ಷೇತ್ರ ದಲ್ಲಿದೆ. ಮುಂದಿನ ಸಂಚಿಕೆಯಲ್ಲಿ ಹಳ್ಳಿ ಹಳ್ಳಿಯ, ವಾರ್ಡ ವಾರ್ಡ ಗಳ ಸಮಸ್ಯೆ ಗಳ ಕರಿತು ಸಮಗ್ರ ವರದಿ ಮಾಡಲಾಗುತ್ತದೆ.

## ಮರೆಯಲಾಗದ ಅನುಭವ:ಡಿಕೆಶಿ



ಮಲ್ಲಮ್ಮ ನುಡಿ ವಾರ್ತೆ

ಪ್ರಯಾಗ್ ರಾಜ್:ಫೆ.9: ಉತ್ತರಪ್ರದೇಶದಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳದಲ್ಲಿ ಕರ್ನಾಟಕದ ಉಪಮುಖ್ಯಮಂತ್ರಿಡಿ.ಕೆ.ಶಿವಕುಮಾರ್ ಅವರು ಕುಟುಂಬ ಸಮೇತರಾಗಿ ಭಾಗಿಯಾಗಿದ್ದು, ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದ್ದಾರೆ.

144 ವರ್ಷಗಳಿಗೊಮ್ಮೆ ಉತ್ತರಪ್ರದೇಶದಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳದಲ್ಲಿ ಕರ್ನಾಟಕದ ಉಪಮುಖ್ಯಮಂತ್ರಿಡಿ.ಕೆ.ಶಿವಕುಮಾರ್ ಅವರು ಭಾಗಿಯಾಗಿದ್ದು, ಇಂದು(ಫೆ.09) ಪತ್ನಿ ಉಷಾ ಅವರ ಜೊತೆಯಲ್ಲಿ ತ್ರಿವೇಣಿ ಸಂಗಮದಲ್ಲಿ ಪುಣ್ಯಸ್ನಾನ ಮಾಡಿದರು. ಈಗಾಗಲೇ ಡಿಕೆಶಿ ಪುತ್ರಿ ಐಶ್ವರ್ಯಾ ಅವರು ಪ್ರಯಾಗ್‌ರಾಜ್‌ಗೆ ತೆರಳಿ ಪವಿತ್ರ ಸ್ನಾನ ಮಾಡಿದ್ದರು. ಈಗ ಡಿಕೆಶಿ ದಂಪತಿ ತ್ರಿವೇಣಿ ಸಂಗಮದಲ್ಲಿ ಮಿಂದೆದ್ದಿದ್ದಾರೆ.

ಡಿಕೆ ಶಿವಕುಮಾರ್ ಅವರಿಗೆ ನೊಣವಿನಕೆರೆ ಕಾಡಸಿದ್ದೇಶ್ವರ ಮಠದ ಕರಿವೃಷಭ ರಾಜದೇಶಿ ಕೇಂದ್ರ ಶಿವಯೋಗಿಶ್ವರ ಶಿವಾಚಾರ್ಯ ಸ್ವಾಮೀಜಿ ಅವರೂ ಕೂಡ ಸಾಥ್ ನೀಡಿದರು. ಅವರ ಜೊತೆಯಲ್ಲೇ ಡಿಕೆಶಿ ದಂಪತಿ ಮಹಾಕುಂಭಮೇಳದಕ್ಕೆ ತೆರಳಿ ತ್ರಿವೇಣಿ ಸಂಗಮದಲ್ಲಿ ಮಿಂದೆದ್ದರು.

ವಿಶೇಷ ಪೂಜೆ

ಗಂಗಾ, ಯಮುನಾ ಮತ್ತು ಸರಸ್ವತಿ ಎಂಬ ಮೂರು ನದಿಗಳ ಸಂಗಮದಲ್ಲಿ ನೊಣವಿನಕೆರೆ ಕಾಡಸಿದ್ದೇಶ್ವರ ಮಠದ ಕರಿವೃಷಭ ರಾಜದೇಶಿ ಕೇಂದ್ರ ಶಿವಯೋಗಿಶ್ವರ ಶಿವಾಚಾರ್ಯ ಸ್ವಾಮೀಜಿ ನೇತೃತ್ವದಲ್ಲಿ ಡಿಕೆ ಶಿವಕುಮಾರ್ ಹಾಗೂ ಅವರ ಪತ್ನಿ ಉಷಾ ಅವರು ಆರತಿ ಬೆಳಗಿ ವಿಶೇಷ ಪೂಜೆ ಸಲ್ಲಿಸಿದರು.

ಇನ್ನು ಪುಣ್ಯಸ್ನಾನ ಮಾಡಿರುವ ಫೋಟೋಗಳನ್ನು ಡಿಕೆಶಿ ತಮ್ಮ ಸಾಮಾಜಿಕ ಜಾಲತಾಣಗಳ ಖಾತೆಗಳಲ್ಲಿ ಹಂಚಿಕೊಂಡಿದ್ದು, ಉತ್ತರ ಪ್ರದೇಶದ ಪ್ರಯಾಗ್ ರಾಜ್‌ನಲ್ಲಿ ನಡೆಯುತ್ತಿರುವ ಮಹಾ ಕುಂಭಮೇಳದಲ್ಲಿ ಕುಟುಂಬ ಸಮೇತ ಪಾಲ್ಗೊಂಡು, ತ್ರಿವೇಣಿ ಸಂಗಮದಲ್ಲಿ ಪುಣ್ಯಸ್ನಾನ ಮಾಡಿದೆ.144 ವರ್ಷಗಳಿಗೊಮ್ಮೆ ನಡೆಯುವ ಮಹಾ ಕುಂಭದಲ್ಲಿ ಪಾಲ್ಗೊಳ್ಳಲು ಅವಕಾಶ ಸಿಕ್ಕಿದ್ದು ನಿಜಕ್ಕೂ ಖುಷಿ ತಂದಿದೆ ಎಂದು ಬರೆದುಕೊಂಡಿದ್ದಾರೆ.

ಉತ್ತಮ ವ್ಯವಸ್ಥೆ

ಇನ್ನು ಪವಿತ್ರ ಸ್ನಾನದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಡಿಕೆ ಶಿವಕುಮಾರ್, 'ಕುಂಭಮೇಳವನ್ನು ಇಷ್ಟೊಂದು ಪವಿತ್ರರೀತಿಯಲ್ಲಿ ನಡೆಸಿದ್ದಕ್ಕಾಗಿ ಎಲ್ಲಾ ಸಂಘಟಕರಿಗೆ ನಾನು ಧನ್ಯವಾದ ಹೇಳಲು ಬಯಸುತ್ತೇನೆ. ಇದು ಒಬ್ಬರ ಜೀವನದಲ್ಲಿ ಒಂದು ಐತಿಹಾಸಿಕ ಕ್ಷಣವಾಗಿದೆ. ಇಲ್ಲಿ ನೆರೆದಿರುವ ಲಕ್ಷಾಂತರ ಜನರು ವ್ಯವಸ್ಥೆಗಳನ್ನು ವೀಕ್ಷಿಸುತ್ತಿದ್ದಾರೆ. ಅಂತಹ ಕಾರ್ಯಕ್ರಮವನ್ನು ಆಯೋಜಿಸುವುದು ಸಣ್ಣ ಕೆಲಸವಲ್ಲ ಎಂದು ನನಗೆ ಅರ್ಥವಾಗಿದೆ. ಇದನ್ನು ಸಾಧ್ಯವಾಗಿಸಲು ಎಷ್ಟು ಶ್ರಮ ಬೇಕಾಗುತ್ತದೆ ಎಂದು ನನಗೆ ತಿಳಿದಿದೆ" ಎಂದು ಹೇಳಿದರು.

ಪವಿತ್ರಸ್ನಾನ ಟೀಕಿಸಿದ್ದ ಮಲ್ಲಿಕಾರ್ಜುನ ಖರ್ಗೆ

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಹಾಕುಂಭದಲ್ಲಿ ಪುಣ್ಯಸ್ನಾನ ಮಾಡಿದ್ದಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಟೀಕೆ ಮಾಡಿದ್ದರು. ಇದು ಭಾರೀ ಪರ ವಿರೋಧ ಚರ್ಚೆಗೆ ಗ್ರಾಸವಾಗಿತ್ತು. ಇದರ ಬೆನ್ನಲ್ಲೇ ಇದೀಗ ಕರ್ನಾಟಕ ಕಾಂಗ್ರೆಸ್ ಅಧ್ಯಕ್ಷ, ಡಿಸಿಎಂ ಡಿಕೆ ಶಿವಕುಮಾರ್ ಅವರು ತ್ರಿವೇಣಿ ಸಂಗಮದಲ್ಲಿ ಪುಣ್ಯ ಸ್ನಾನ ಮಾಡಿ ಗಮನಸೆಳೆದಿದ್ದಾರೆ.

ಅಂದಹಾಗೆ ಗಂಗಾ, ಯಮುನಾ ಮತ್ತು ಸರಸ್ವತಿ ನದಿಗಳ ಪೂಜ್ಯ ಮತ್ತು ಆಧ್ಯಾತ್ಮಿಕವಾಗಿ ಸಂಗಮವಾಗಿದೆ. ಹೀಗಾಗಿ ಇಲ್ಲಿ ಸ್ನಾನಮಾಡುವುದನ್ನು ಪುಣ್ಯಸ್ನಾನ ಎಂದು ಕರೆಯಲಾಗುತ್ತದೆ.

## ದೆಹಲಿ ಮುಖ್ಯಮಂತ್ರಿ ಸ್ಥಾನಕ್ಕೆ ಆತಿಶಿ ಮರ್ಲೆನಾ ರಾಜೀನಾಮೆ

ಮಲ್ಲಮ್ಮ ನುಡಿ ವಾರ್ತೆ

ನವದೆಹಲಿ,ಫೆ.9: ಪಕ್ಷವು ಹೀನಾಯ ಸೋಲು ಕಂಡ ಹಿನ್ನಲೆಯಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ಆತಿಶಿ ಸಿಂಗ್ ಮರ್ಲೆನಾ ಅವರು ರಾಜೀನಾಮೆ ನೀಡಿದ್ದಾರೆ. ಇಂದು ಬೆಳಗ್ಗೆ ದೆಹಲಿ ಲೆಫ್ಟಿನೆಂಟ್ ಗೌರ್ನರ್ ಜನರಲ್ ವಿನಯ್ಕುಮಾರ್ ಸೆಕ್ಸೆ?ನ ಅವರನ್ನು ಭೇಟಿಯಾದ ಆತಿಶಿ ಸಿಂಗ್ ತಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು.

ರಾಜೀನಾಮೆಯನ್ನು ಸೆಕ್ಸೆ?ನ ಅಂಗೀಕರಿಸಿದ್ದು, ಮುಂದಿನ ಸರ್ಕಾರ ರಚನೆಯಾಗುವವರೆಗೂ ಹಂಗಾಮಿ ಮುಖ್ಯಮಂತ್ರಿಯಾಗಿ ಮುಂದುವರೆಯಲು ಸೂಚಿಸಿದ್ದಾರೆ. ನಿನ್ನೆ ಪ್ರಕಟಗೊಂಡ ದೆಹಲಿಯ 70 ಕ್ಷೆ?ತ್ರಗಳ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ 48, ಎಎಪಿ 22 ಗೆದ್ದರೆ ಕಾಂಗ್ರೆಸ್ ಸತತ ಮೂರನೇ ಬಾರಿಯೂ ಒಂದೂ ಸ್ಥಾನವನ್ನೂ ಗಳಿಸದೆ ಶೂನ್ಯ ಸಂಪಾದನೆ ಮಾಡಿದೆ.

## ಮಂಗ ನಾಟಕ್ಕೆ ಬೇಸ್ತು ಬಿದ್ದ ಶ್ರೀಲಂಕಾ: ದೇಶಾದ್ಯಂತ ವಿದ್ಯುತ್ ವ್ಯತ್ಯಯ

ಕೊಲಂಬೋ:ಶ್ರೀಲಂಕಾಗೂ ಕೋತಿಗೂ ಬಿಡದ ನಂಟು. ಇತಿಹಾಸದಲ್ಲಿ ಅಂದರೆ ರಾಮಾಯಣದಲ್ಲಿ ಭಾರತದಿಂದ ಹೋದ ಕೋತಿ (ಹನುಮಂತ) ಯೊಂದು ಇಡೀ ಲಂಕೆಗೆ ಬೆಂಕಿ ಇಟ್ಟ ಕಥೆ ಕೇಳಿರಬಹುದು. ಅಂತೆಯೇ ಇದೀಗ ಮತ್ತೆ ಶ್ರೀಲಂಕಾ ಕೋತಿಯಿಂದಾಗಿ ಭಾರಿ ಸಂಕಷ್ಟಕ್ಕೆ ಸಿಲುಕಿದೆ.

ಇಡೀ ಶ್ರೀಲಂಕಾದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯಾಪಕ ವ್ಯತ್ಯಯವಾಗಿದ್ದು, ಇದಕ್ಕೆ ಕೋತಿಯೊಂದು ಕಾರಣ ಎಂದು ಹೇಳಲಾಗಿದೆ. ಶ್ರೀಲಂಕಾದಲ್ಲಿ ಭಾನುವಾರ ಕೊಲಂಬೊ ಉಪನಗರದಲ್ಲಿ ಮಂಗವೊಂದು ವಿದ್ಯುತ್ ಗ್ರಿಡ್‌ಗೆ ಸಿಲುಕಿದ ಪರಿಣಾಮ ಆ ದೇಶಾದ್ಯಂತ ವಿದ್ಯುತ್ ವ್ಯತ್ಯಯ ಉಂಟಾಗಿದೆ ಎಂದು ವಿದ್ಯುತ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.ಸ್ಥಳೀಯ ಸಮಯ ಬೆಳಿಗ್ಗೆ 11:30 ರ ಸುಮಾರಿಗೆ ಇಡೀ ಗ್ರಿಡ್ ವಿಫಲವಾಗಿದ್ದು, ಇಡೀ ದೇಶಾದ್ಯಂತ ವಿದ್ಯುತ್ ಸೇವೆಯಲ್ಲಿ ವ್ಯತ್ಯಯ ಉಂಟಾಗಿತ್ತು. ಕೂಡಲೇ ಎಚ್ಚೆತ್ತ ಅಧಿಕಾರಿಗಳು ಹಲವಾರು ಗಂಟೆಗಳ ನಿರಂತರ ಕಾರ್ಯಾಚರಣೆ ನಡೆಸಿ ವಿದ್ಯುತ್ ಸರಬರಾಜು ಪ್ರಕ್ರಿಯೆ ಪುನಃಸ್ಥಾಪಿಸಿದ್ದಾರೆ ಎಂದು ಅಧಿಕಾರಿ ಹೇಳಿದರು.

ಈ ಸಮಸ್ಯೆಯಿಂದಾಗಿ ಶ್ರೀಲಂಕಾದ ಕೆಲವು ಪ್ರದೇಶಗಳಲ್ಲಿ ಐದು ಗಂಟೆಗಳಿಗೂ ಹೆಚ್ಚು ಕಾಲ ವಿದ್ಯುತ್ ಸ್ಥಗಿತಗೊಂಡಿದ್ದವು ಎಂದು ಅಧಿಕಾರಿ ಹೇಳಿದರು.

ಶ್ರೀಲಂಕಾದ ಪಣದುರದಲ್ಲಿರುವ ವಿದ್ಯುತ್ ಗ್ರಿಡ್‌ನ ಸಬ್‌ಸ್ಟೇಷನ್‌ನಲ್ಲಿ ಕೋತಿಯೊಂದು ಗ್ರಿಡ್ ಸಿಲುಕಿತ್ತು. ಪರಿಣಾಮ ವಿದ್ಯುತ್ ಸರಬರಾಜು ಸ್ಥಗಿತವಾಯಿತು.

## ಮುಖ್ಯಮಂತ್ರಿ ಬೀರೆನ್ ಸಿಂಗ್ ರಾಜೀನಾಮೆ

ಉಲ್ಲೇಖಿಸಿದ್ದಾರೆ.ಕೇಂದ್ರ ಸರ್ಕಾರ ಹಲವು ಯೋಜನಗಳನ್ನು ಮಣಿಪುರದಲ್ಲಿ ಜಾರಿಗೊಳಿಸಿದೆ. ಮಣಿಪುರದ ಅಭಿವೃದ್ಧಿ, ಜನರ ಸುರಕ್ಷತೆ ವಿಚಾರದಲ್ಲಿ ಹಲವು ಯೋಜನೆಗಳನ್ನು ಕೈಗೆತ್ತಿಕೊಂಡು ಕೆಲಸ ಮಾಡಿದ್ದೇವೆ. ಈ ಪೈಕಿ ಕೆಲ ಯೋಜನೆಗಳನ್ನು ಇಲ್ಲಿ ಉಲ್ಲೇಖಿಸಲು ಬಯಸುತ್ತೇನೆ ಎಂದು ಬಿರೆನ್ ಸಿಂಗ್ ಪ್ರಮುಖ ವಿಷಯಗಳನ್ನು ಉಲ್ಲೇಖಿಸಿದ್ದಾರೆ.ಮಣಿಪುರದ ಸಂಸ್ಕೃತಿ, ಆಚಾರ ವಿಚಾರ, ಪದ್ಧತಿಗಳನ್ನು ಗೌರವಿಸಿ ಸೂಕ್ತ ಸ್ಥಾನ ಮಾನ ಕಲ್ಪಿಸಲಾಗಿದೆ. ಜೊತೆಗೆ ಮಣಿಪರದ ಶ್ರೀಮಂತ ಸಂಸ್ಕೃತಿಯನ್ನು ಮುಂದುವರಿಸುವ ಯೋಜನೆಗಳನ್ನು ಕೈಗೊಳ್ಳಲಾಗಿದೆ. ಅಂತಾರಾಷ್ಟ್ರೀಯ ಗಡಿ ಮೂಲಕ ಅಕ್ರಮವಾಗಿ ನುಸುಳುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಾಗಿದೆ. ಜೊತೆಗೆ ಹೀಗೆ ಬಂಧಿಸಿದ ಆರೋಪಿಗಳನ್ನು ಗಡೀಪಾರು ಮಾಡುವ ಕಟ್ಟು ನಿಟ್ಟಿನ ನೀತಿಯನ್ನು ಜಾರಿಗೊಳಿಸಲಾಗಿದೆ. ಮಾದಕ ದ್ರವ್ಯಗಳ ವಿರುದ್ಧ ಮತ್ತಷ್ಟು ಶಕ್ತಿಯುತವಾಗಿ ಹೋರಾಡಿದ್ದೇವೆ. ಈ ಪೈಕಿ ಹಲವು ಜಾಲಗಳನ್ನು ಪತ್ತೆ ಹಚ್ಚಿಸಿ ಬಂಧಿಸಲಾಗಿದೆ. ಬಯೋಮೆಟ್ರಿಕ್ ಸೇರಿದಂತೆ ನಾಗರೀಕ ಸುರಕ್ಷತಾ ವಿಧಾನಗಳನ್ನು ಜಾರಿ ಮಾಡಲಾಗಿದೆ. ಗಡಿಯಲ್ಲಿ ತಡೆಗೋಡೆ ಸೇರಿದಂತೆ ಇತರ ಅಭಿವೃದ್ಧಿ ಕೆಲಸಗಳು ಪ್ರಗತಿಯಲ್ಲಿದೆ ಎಂದು ಬಿರೆನ್ ಸಿಂಗ್ ತಮ್ಮ ರಾಜೀನಾಮೆ ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಮಣಿಪುರ ಹಿಂಸಾಚಾರ ವೇಳೆ ಬಿರೆನ್ ಸಿಂಗ್ ಪ್ರತಿಪಕ್ಷ ಸೇರಿದಂತೆ ದೇಶಾದ್ಯಂತ ಭಾರಿ ಪ್ರತಿಭಟನೆ ಎದುರಿಸಿದ್ದರು. ಮಣಿಪುರ ಅಮಾಯಕ ಜನರ ಪ್ರಾಣ ಉಳಿಸಲು ಮುಖ್ಯಮಂತ್ರಿ ಬಿರೆನ್ ಸಿಂಗ್ ಮುಂದಾಗಿಲ್ಲ, ಮಣಿಪುರ ಹಿಂಸಾಚಾರದಲ್ಲಿ ಮುಖ್ಯಮಂತ್ರಿ ಪಾತ್ರ ಸೇರಿದಂತೆ ಹಲವು ಆರೋಪಗಳು ಬೀರೆನ್ ಸಿಂಗ್ ಮೇಲೆ ಕೇಳಿಬಂದಿದೆ. ಸಂಸತ್ತಿನಲ್ಲಿ ಮೋದಿ ಸರ್ಕಾರಕ್ಕೂ ಮಣಿಪುರ ಹಿಂಸಾಚಾರ ತೀವ್ರ ತಲೆನೋವಾಗಿ ಪರಿಣಮಿಸಿತ್ತು. ಈ ಹಿಂಸಾಚಾರದ ನಡುವೆ ಬಿರೆನ್ ಸಿಂಗ್ ರಾಜೀನಾಮೆಗೆ ಮುಂದಾಗಿದ್ದರು. ಆದರೆ ಹಿಂಸಾಚಾರ ನಡೆಯುತ್ತಿರುವ ವೇಳೆ ರಾಜೀನಾಮೆ ನೀಡಿದರೆ ಪಲಾಯಾನ ಮಾಡಿದ ಅಪವಾದ ಬರಲಿದೆ ಎಂದು ಬಿಜೆಪಿ ಮನ ಒಲಿಸಿತ್ತು. ಹೀಗಾಗಿ ಮತ್ತೆ ಮುಖ್ಯಮಂತ್ರಿಯಾಗಿ ಮುಂದುವರಿದ ಬಿರೆನ್ ಸಿಂಗ್ ಮಣಿಪುರದ ಪರಿಸ್ಥಿತಿ ನಿಯಂತ್ರಣಕ್ಕೆ ತಂದಿದ್ದರು. ಆದರೆ ಈಗಲೂ ಮಣಿಪುರ ಸಂಪೂರ್ಣ ಶಾಂತವಾಗಿಲ್ಲ. ಮಣಿಪುರದ ಬಿಜೆಪಿಯಲ್ಲಿ ಆಂತರಿಕ ಬಡಿದಾಟ ಜೋರಾಗಿದೆ. ಮಣಿಪುರ ಹಿಂಸಾಚಾರ ವಿಚಾರದಲ್ಲಿ ಆರಂಭಗೊಂಡ ಬಂಡಾಯ ಇದೀಗ ಬಿರೆನ್ ಸಿಂಗ್ ವಿರುದ್ದ ತೀವ್ರವಾಗಿ ನಡೆದಿತ್ತು. ಇತ್ತ ಮಣಿಪುರ ಬಿಜೆಪಿ ಸರ್ಕಾರಕ್ಕೆ ಬೆಂಬಲ ನೀಡಿದ ಪ್ರಾದೇಶಿಕ ಪಕ್ಷ ಬೆಂಬಲ ವಾಪಸ್ ಪಡೆಯುವ ಎಚ್ಚರಿಕೆ ನೀಡಿತ್ತು. ರಾಜಕೀಯ ಬೆಳವಣಿಗೆ ಬೆನ್ನಲ್ಲೇ ಬಿರೆನ್ ಸಿಂಗ್ ರಾಜೀನಾಮೆ ನೀಡಿದ್ದಾರೆ. ಬಿರೆನ್ ಸಿಂಗ್ ರಾಜೀನಾಮೆ ನೀಡುತ್ತಿದ್ದಂತೆ ಭದ್ರತಾ ಪಡೆಗಳು ಹೈ ಅಲರ್ಟ್ ಆಗಿದೆ. ಹಿಂಸಾಚಾರ ಸಾಧ್ಯತೆ ಹೆಚ್ಚಿರುವ ಕಾರಣ ಎಲ್ಲೆಡೆ ಪೊಲೀಸ್ ಭದ್ರತೆ ಹೆಚ್ಚಿಸಲಾಗಿದೆ. ಅರೆ ಸೇನಾ ಪಡೆ ನೆರವು ಪಡೆಯಲಾಗಿದೆ. ಹಲವು ಗುಂಪುಗಳಿಂದ ಹಿಂಸಾಚಾರ ಸಾಧ್ಯತೆ ಇರುವ ಕಾರಣ ಈ ರಾಜಕೀಯ ಬೆಳವಣಿಗೆ ಮತ್ತೊಮ್ಮೆ ಮಣಿಪುರದಲ್ಲಿ ಹಿಂಸಾಚಾರಕ್ಕೆ ಸಾಧ್ಯತೆ ನೀಡಲಿದೆ. ಹೀಗಾಗಿ ಭದ್ರತೆಯನ್ನು ಹೆಚ್ಚಿಸಲಾಗುತ್ತಿದೆ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.
Editor: Ramesh Reddy, Office Ph. No: +91 9449732000.

## ರಾಜ್ಯಮಟ್ಟದ ಕಲಾ ಸಂಭ್ರಮೋತ್ಸವ: ನೃತ್ಯ ಕಲೆಗಳ ಅನಾವರಣ

# ನೃತ್ಯದ ಸೊಬಗಿಗೆ ಮನ ಸೋತ ಪ್ರೇಕ್ಷಕರು



ಬೀದರ:ಪೂಜ್ಯ ಚನ್ನಬಸವ ಪಟ್ಟದ್ದೇವರು ರಂಗ ಮಂದಿರದಲ್ಲಿ ನಡೆದ ರಾಜ್ಯಮಟ್ಟದ ಕಲಾ ಸಂಭ್ರಮೋತ್ಸವದ ವೇದಿಕೆ ಸಮಾರಂಭವನ್ನು ನಿವೃತ್ತ ಪೊಲೀಸ್ ಮಹಾ ನಿರ್ದೇಶಕ ಡಾ. ಡಿ.ವಿ. ಗುರುಪ್ರಸಾದ್ ಉದ್ಘಾಟಿಸಿದರು



ಬೀದರ: ಪೂಜ್ಯ ಚನ್ನಬಸವ ಪಟ್ಟದ್ದೇವರು ರಂಗ ಮಂದಿರದಲ್ಲಿ ನಡೆದ ರಾಜ್ಯಮಟ್ಟದ ಕಲಾ ಸಂಭ್ರಮೋತ್ಸವದಲ್ಲಿ ಬಾಗಲಕೋಟೆಯ ವಿದುಷಿ ಶುಭದಾ ದೇಶಪಾಂಡೆ ಅವರಿಗೆ ನಾಟ್ಯಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು



ಬೀದರ: ಪೂಜ್ಯ ಚನ್ನಬಸವ ಪಟ್ಟದ್ದೇವರು ರಂಗ ಮಂದಿರದಲ್ಲಿ ನಡೆದ ರಾಜ್ಯಮಟ್ಟದ ಕಲಾ ಸಂಭ್ರಮೋತ್ಸವದಲ್ಲಿ ನಾಟ್ಯಶ್ರೀ ನೃತ್ಯಾಲಯ ಕಲಾವಿದರು ಆಕರ್ಷಕ ನೃತ್ಯ ಪ್ರದರ್ಶಿಸಿದರು



ಬೀದರ:ಮಹಾಶಕ್ತಿ ವೀರಭದ್ರ ನೃತ್ಯ ರೂಪಕದ ದೃಶ್ಯ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಫೆ. 09: ನಾಟ್ಯಶ್ರೀ ನೃತ್ಯಾಲಯ ವತಿಯಿಂದ ಇಲ್ಲಿಯ ಪೂಜ್ಯ ಚನ್ನಬಸವ ಪಟ್ಟದ್ದೇವರು ರಂಗಮಂದಿರದಲ್ಲಿ ಶನಿವಾರ ನಡೆದ ರಾಜ್ಯಮಟ್ಟದ ಕಲಾ ಸಂಭ್ರಮೋತ್ಸವದಲ್ಲಿ ನೃತ್ಯದ ಸೊಬಗಿಗೆ ಪ್ರೇಕ್ಷಕರು ಮನ ಸೋತರು.

ಅಘೋರಿ ನೃತ್ಯ, ಭಾಂಗಡ ನೃತ್ಯ, ಗರ್ಬಾ ನೃತ್ಯ, ಭರತ ನಾಟ್ಯ, ಜಾನಪದ ನೃತ್ಯ, ವಚನ ನೃತ್ಯ, ಮರಾಠಿ ನೃತ್ಯ, ಪುಷ್ಪಾಂಜಲಿ, ದಶಾವತಾರ, ಕೃಷ್ಣನ ಲೀಲೆ, ನಟೇಶ ಕೌತ್ವಂ, ತಿಲ್ಲಾನ ಮೊದಲಾದ ನೃತ್ಯಗಳು ನೆರೆದವರನ್ನು ಪುಳಕಿತಗೊಳಿಸಿದವು.

ಮಂಗಳೂರಿನ ಚಲನಚಿತ್ರ ಬಾಲನಟ ಮಾಸ್ಟರ್ ಶೌರ್ಯರಾವ್ ಅವರು ಪ್ರದರ್ಶಿಸಿದ ಆಕರ್ಷಕ ನೃತ್ಯ, ವಿದುಷಿ ಸೌಂದರ್ಯ ಅವರ ಭರತನಾಟ್ಯ ಮಂತ್ರಮುಗ್ಧಗೊಳಿಸಿದವು. ನಾಟ್ಯಶ್ರೀ ನೃತ್ಯಾಲಯದ ಅಧ್ಯಕ್ಷೆ ರಾಣಿ ಸತ್ಯಮೂರ್ತಿ ನಿರ್ದೇಶನದಲ್ಲಿ ಕಲಾವಿದರು ಪ್ರದರ್ಶಿಸಿದ ಅಘೋರಿ ನೃತ್ಯವು ಮಹಾ ಕುಂಭ ಮೇಳದಲ್ಲೇ ಇರುವಂಥ ಅನುಭವ ಉಂಟು ಮಾಡಿತು. ಬಾಗಲಕೋಟೆಯ ನಟರಾಜ ಸಂಗೀತ ಮತ್ತು ನೃತ್ಯ ನಿಕೇತನ ಸಂಸ್ಥೆಯ ಕಲಾವಿದರು ಆಕರ್ಷಕ ಶಾಸ್ತ್ರೀಯ ನೃತ್ಯ ಪ್ರದರ್ಶಿಸಿದರು.

'ಮಹಾಶಕ್ತಿ ವೀರಭದ್ರ' ರೂಪಕದಲ್ಲಿ ನಾಟ್ಯಶ್ರೀ ನೃತ್ಯಾಲಯದ ಕಲಾವಿದರು ದಕ್ಷ ಯಜ್ಞ ಹಾಗೂ ವೀರಭದ್ರನ ಜನನದ ಸನ್ನಿವೇಶಗಳನ್ನು ಕಣ್ಣಿಗೆ ಕಟ್ಟುವಂತೆ ಪ್ರದರ್ಶಿಸಿದರು. 'ಕನಕದಾಸರಿಗೆ ಶ್ರೀ ಕೃಷ್ಣ ದರ್ಶನ' ರೂಪಕವು ಕನಕದಾಸರಿಗೆ ಶ್ರೀಕೃಷ್ಣನ ದರ್ಶನ ಹೇಗಾಯಿತು ಎನ್ನುವುದನ್ನು ಎಳೆ ಎಳೆಯಾಗಿ ಬಿಡಿಸಿಟ್ಟಿತು. ಒನಕೆ ಓಬವ್ವ ರೂಪಕ ವೀರ ವನಿತೆ ಒನಕೆ ಓಬವ್ವರ ಶೌರ್ಯವನ್ನು ಅನಾವರಣಗೊಳಿಸಿತು.

ಕಲಬುರಗಿಯ ಪಂಡಿತ ಹನುಮಂತರಾವ್ ಮಳ್ಳಿ, ಕಲಾವಿದ ಶಂಭುಲಿಂಗ ವಾಲ್ದೊಡ್ಡಿ ಹಾಗೂ ಇತರರು ಸಂಗೀತ ಸುಧೆ ಹರಿಸಿದರು. ಭಾನುಪ್ರಿಯ ಅರಳಿ ಹಾಗೂ ತಂಡದವರು ಸುಗಮ ಸಂಗೀತ, ಮಹೇಶಕುಮಾರ ಕುಂಬಾರ ಜಾನಪದ ಗಾಯನ ನಡೆಸಿಕೊಟ್ಟರು. ಬೆಂಗಳೂರಿನ ನಾರಾಯಣ್ ಭಟ್ ಮಾಯಾ ಜಾದು ಪ್ರದರ್ಶನದ ಮೂಲಕ ಎಲ್ಲರನ್ನು ಮೂಕಸ್ಮಿತರಾಗಿಸಿದರು.

ಬಾಗಲಕೋಟೆಯ ಕಲಾವಿದೆ ವಿದುಷಿ ಶುಭದಾ ಗುರುರಾಜ ದೇಶಪಾಂಡೆ ಅವರಿಗೆ ರೂ. 15 ಸಾವಿರ ನಗದು ಹಾಗೂ ಪ್ರಮಾಣ ಪತ್ರ ಒಳಗೊಂಡ ನಾಟ್ಯಶ್ರೀ ಪ್ರಶಸ್ತಿ 2025 ಪ್ರದಾನ ಮಾಡಲಾಯಿತು. 2023–24ನೇ ಸಾಲಿನ ಭರತನಾಟ್ಯ ಜೂನಿಯರ್ ಪರೀಕ್ಷೆಯಲ್ಲಿ ಉತ್ತಮ ಅಂಕಗಳೊಂದಿಗೆ ತೇರ್ಗಡೆಯಾದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಪ್ರೊ.ಸಿದ್ರಾಮಪ್ಪ ಮಾಸಿಮಾಡೆ, ರಾಮಕೃಷ್ಣ ಸಾಳೆ, ರಾಜೇಂದ್ರಕುಮಾರ ಗಂದಗೆ, ಸಂಜೀವಕುಮಾರ ಅತಿವಾಳೆ ಹಾಗೂ ರೇಖಾ ಅಪ್ಪಾರಾವ್ ಸೌದಿ ಜಂ–ಟಿಯಾಗಿ ನಟರಾಜನಿಗೆ ಪೂಜೆ ಸಲ್ಲಿಸುವ ಮೂಲಕ ಸಾಂಸ್ಕೃತಿಕ ಕಲೆಗಳ ಪ್ರದರ್ಶನಕ್ಕೆ ಚಾಲನೆ ನೀಡಿದರು. ಪ್ರಶಸ್ತಿ ಪ್ರದಾನ ಹಾಗೂ ವೇದಿಕೆ ಕಾರ್ಯಕ್ರಮವನ್ನು ನಿವೃತ್ತ ಪೊಲೀಸ್ ಮಹಾ ನಿರ್ದೇಶಕ ಡಾ. ಡಿ.ವಿ. ಗುರುಪ್ರಸಾದ್ ಉದ್ಘಾಟಿಸಿದರು. ನಾಟ್ಯಶ್ರೀ ನೃತ್ಯಾಲಯದ ಅಧ್ಯ–ಕ್ಷೆ ರಾಣಿ ಸತ್ಯಮೂರ್ತಿ ಅಧ್ಯಕ್ಷತೆ ವಹಿಸಿದ್ದರು.

ಬೀದರ್ ವಿಶ್ವವಿದ್ಯಾಲಯದ ಕುಲಸಚಿವೆ ಸುರೇಖಾ, ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಸೋಮಶೇಖರ ಬಿರಾದಾರ ಚಿದ್ರಿ, ಸಾಹಿತಿ ಶಿವಕುಮಾರ ಕಟ್ಟೆ, ರಾಷ್ಟ್ರೀಯ ಬುಡಕಟ್ಟು ಕಲಾ ಪರಿಷತ್ ಪ್ರಧಾನ ಕಾರ್ಯದರ್ಶಿ ರಾಜಕುಮಾರ ಹೆಬ್ಬಾಳೆ, ಪ್ರಧಾನ ಅಂಚೆ ಪಾಲಕಿ ಮಂಗಲಾ ಭಾಗವತ್, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಡಿಟಿಒ ಸುಜಾತಾ ಪೂಜಾರಿ, ದೇವಿದಾಸ ಜೋಶಿ, ರಾಘವೇಂದ್ರ ಅಡಿಗ, ಬಸವರಾಜ ಮೂಲಗೆ ನಿರೂಪಿಸಿದರು. ಪ್ರೇಕ್ಷಕರಿಗೆ ಚಹಾ, ಶುದ್ಧ ಕುಡಿಯುವ ನೀರು, ರುಚಿಕಟ್ಟಾದ ಊಟದ ವ್ಯವಸ್ಥೆ ಮಾಡಲಾಗಿತ್ತು. ವಿವಿಧ ಜಿಲ್ಲೆಗಳ ಕಲಾ ತಂಡಗಳು ಪಾಲ್ಗೊಂಡಿದ್ದವು.

### ನಾಟ್ಯ ಕಲೆ ಉಳಿಸಿ ಬೆಳೆಸಿ

ಬೀದರ್: ಭರತ ನಾಟ್ಯ ಶ್ರೀಮಂತ ಕಲೆಯಾಗಿದ್ದು, ಅದನ್ನು ಉಳಿಸಿ ಬೆಳೆಸುವ ಕೆಲಸ ಆಗಬೇಕು ಎಂದು ನಿವೃತ್ತ ಪೊಲೀಸ್ ಮಹಾ ನಿರ್ದೇಶಕ

ಡಾ. ಡಿ.ವಿ. ಗುರುಪ್ರಸಾದ್ ಅಭಿಪ್ರಾಯಪಟ್ಟರು.

ರಾಜ್ಯಮಟ್ಟದ ಕಲಾ ಸಂಭ್ರಮೋತ್ಸವದಲ್ಲಿ ಮಾತನಾಡಿದ ಅವರು, ಮಕ್ಕಳಲ್ಲಿ ನೃತ್ಯ, ಸಂಗೀತ ಸೇರಿದಂತೆ ಸೃಜನಶೀಲ ಕಲೆಗಳ ಆಸಕ್ತಿ ಬೆಳೆಸಬೇಕು ಎಂದು ತಿಳಿಸಿದರು.

ದಕ್ಷಿಣ ಕರ್ನಾಟಕಕ್ಕೆ ಸೀಮಿತವಾಗಿದ್ದ ಶಾಸ್ತ್ರೀಯ ನೃತ್ಯ ಕಲಾ ಪ್ರಕಾರಗಳನ್ನು ಶರಣ ನಾಡು ಬೀದ???ನಲ್ಲಿ ಪಸರಿಸಿದ ಶ್ರೇಯ ನಾಟ್ಯಶ್ರೀ ನೃತ್ಯಾಲಯಕ್ಕೆ ಸಲ್ಲುತ್ತದೆ. ಭರತನಾಟ್ಯ ಕಲೆ ಬೆಳೆಸುತ್ತಿರುವ ರಾಣಿ ಸತ್ಯಮೂರ್ತಿ ಅವರ ಕಾರ್ಯ ಶ್ಲಾಘನೀಯ ಎಂದು ಹೇಳಿದರು.

ಬೀದರ್ ಬಗ್ಗೆ ನನಗೆ ಬಹಳ ಪ್ರೀತಿ ಇದೆ. ಈ ಜಿಲ್ಲೆಯಲ್ಲಿ ಎಸ್.ಪಿ.ಯಾಗಿ ಕೆಲಸ ಮಾಡಿದ್ದೇನೆ. ಅನೇಕರೊಂದಿಗೆ ನನ್ನ ಬಾಂಧವ್ಯ ಇದೆ ಎಂದು ತಿಳಿಸಿದರು.

ಬೀದರ್ ವಿಶ್ವವಿದ್ಯಾಲಯದ ಕುಲಸಚಿವೆ ಸುರೇಖಾ ಮಾತನಾಡಿ, ಮಕ್ಕಳನ್ನು ಸಾಧ್ಯವಾದಷ್ಟು ಮೊಬೈ???ನಿಂದ ದೂರವಿರಿಸಬೇಕು. ಅವರನ್ನು ಉತ್ತಮ ಪ್ರಜೆಗಳನ್ನಾಗಿ ರೂಪಿಸಬೇಕು ಎಂದರು.

ನಾಟ್ಯಶ್ರೀ ನೃತ್ಯಾಲಯದ ಅಧ್ಯಕ್ಷೆ ರಾಣಿ ಸತ್ಯಮೂರ್ತಿ, ನಿರ್ದೇಶಕ ಕೆ. ಸತ್ಯಮೂರ್ತಿ ಮಾತನಾಡಿದರು.

## ಪದ್ಮಿನಿ ಕಾಜಿಗೆ ಪಿಎಚ್‌ಡಿ



ಮಲ್ಲಮ್ಮ ನುಡಿ ವಾರ್ತೆ

ಬೀದರ. 09 : ಬೆಳಗಾವಿಯ ವಿ.ಟಿ.ಯು ವಿಶ್ವವಿದ್ಯಾಲಯ ಅಡಿಯಲ್ಲಿ ಬರುವ ಭಾಲ್ಕಿಯ ಭೀಮಣ್ಣ ಖಂಡ್ರೆ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ ಸಂಶೋಧನಾ ಕೇಂದ್ರದ ವಿದ್ಯಾರ್ಥಿನಿ ಪದ್ಮಿನಿ ಕಾಜಿ ಅವರಿಗೆ 'ಡಾಕ್ಟರೇಟ್' ಪದವಿ ಪ್ರದಾನ ಮಾಡಲಾಯಿತು. ಜಗದೀಶ ವಿ. ತವಾಡೆ ಅವರ ಮಾರ್ಗದರ್ಶನದಲ್ಲಿ "ಫ್ಲೋ ಐಂಡ್ ಹೀಟ್ ಟ್ರಾನ್ಸ್ ಫರ್ ಫಾರ್ ದಿ ಅಪ್ಪರ್ ಕಾನ್ವೆಕ್ಟೆಡ್ ಮ್ಯಾಕ್ಸ್ ವೆಲ್ ಫ್ಲ್ಯೂಡ್ ಓವರ್ ಎ ಸ್ಟೆಚಿಂಗ್ ಶೀಟ್ ಇನ್ ಪ್ರಜೆನ್ಸ್ ಆಫ್ ಮ್ಯಾಗ್ನೇಟ್ ಹೈಡ್ರೋಡೈನಿಕ್ಸ್" ಎಂಬ ವಿಷಯದ ಮೇಲೆ ಡಾ. ಪದ್ಮಿನಿ ಕಾಜಿ ಯಶಸ್ವಿಯಾಗಿ ಅಧ್ಯಯನ ಕೈಗೊಂಡಿದ್ದರು.

## ತೊಗರಿ ಕ್ವಿಂ. ಗೆ ೮೦೦೦ ರೂ. ಬೆಂಬಲ ಬೆಲೆಯಂತೆ ಖರೀದಿ

ಮಲ್ಲಮ್ಮ ನುಡಿ ವಾರ್ತೆ

ಬೀದರ: ಫೆ.09: 2024–25ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ಎಫ್.ಎ.ಕ್ಯೂ ಗುಣಮಟ್ಟದ ತೊಗರಿ ಖರೀದಿಗೆ ಸಂಬಂಧಿಸಿದಂತೆ, ತಕ್ಷಣದಿಂದಲೇ ಖರೀದಿ ಪ್ರಕ್ರಿಯೆ ಆರಂಭಿಸಲು ಕ್ರಮ ಕೈಗೊಳ್ಳಲಾಗಿದೆ.

ಕೇಂದ್ರ ಸರ್ಕಾರದ ಬೆಂಬಲ ಬೆಲೆ ರೂ.7,550 ರ ಜೊತೆಗೆ ರಾಜ್ಯ ಸರ್ಕಾರದ ಪ್ರೋತಾಹ ಧನ ರೂ.450 ಪ್ರತಿ ಕ್ವಿಂಟಾಲ್‌ಗೆ, ಸೇರಿ ಒಟ್ಟು ರೂ.8,000 ಪ್ರತಿ ಕ್ವಿಂಟಾಲ್ ರಂತೆ ತೊಗರಿ ಖರೀದಿಸಲು ಜವಳಿ, ಕಬ್ಬು ಅಭಿವೃದ್ಧಿ, ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ಅವರು ಕಳೆದ ಜನವರಿ ಮಾಹೆಯಲ್ಲಿ ಭರವಸೆ ನೀಡಿದ್ದರು. ಅದರಂತೆ ಮುಖ್ಯ ಮಂತ್ರಿಗಳು ಅನುಮೋದನೆ ನೀಡಿದ್ದು ಹಾಗೂ ಇಂದು ಆರ್ಥಿಕ ಇಲಾಖೆ ಸಹಮತಿ ನೀಡಲಾಗಿರುತ್ತದೆ. ಈ ಕುರಿತು ಸಂಬಂಧಿಸಿದ ಇಲಾಖೆಗೆ ತಕ್ಷಣದಿಂದ ಅಷ್ಠಾನಗೊಳಿಸಲು ಸೂಕ್ತ ನಿರ್ದೇಶನ ನೀಡಲಾಗಿದೆ.

ರಾಜ್ಯದ ಪ್ರಮುಖ ತೊಗರಿ ಬೆಳೆಯುವ ಜಿಲ್ಲೆಗಳಾದ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ವಿಜಯಪುರ, ಕೊಪ್ಪಳ, ಬಳ್ಳಾರಿ, ವಿಜಯನಗರ, ಬಾಗಲಕೋಟೆ, ಬೆಳಗಾವಿ, ಚಿತ್ರದುರ್ಗ, ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ವ್ಯಾಪ್ತಿಯ ಗ್ರಾಮೀಣ ಭಾಗದಲ್ಲಿ ಅಂದಾಜು 330 ಖರೀದಿ ಕೇಂದ್ರಗಳನ್ನು ಪ್ರಾರಂಭಿಸಲು ಕ್ರಮ ವಹಿಸಲಾಗಿದೆ

ರೈತ ಬಾಂಧವರು ತಮ್ಮ ಹತ್ತಿರದ ಪಿಎಸಿಎಸ್, ಎಫ್‌ಪಿಒ, ಟಿಎಪಿಸಿಎಂಎಸ್ ಗಳಿಗೆ ಭೇಟಿ ನೀಡಿ ನೊಂದಣಿ ಮಾಡಿಕೊಂಡು ಬೆಂಬಲ ಬೆಲೆ ಯೋಜನೆಯ ಹಾಗೂ ರಾಜ್ಯ ಸರ್ಕಾರದ ಪ್ರೋತ್ಸಾಹಧನದ ಸದುಪಯೋಗ ಪಡೆದುಕೊಳ್ಳಲು ಕೋರಿದೆ.

## ಮಕ್ಕಳಿಗೆ ಚಿಕ್ಕಂದಿನಲ್ಲೇ ಸಂಸ್ಕಾರ ಕೊಡಿ: ಚಂದ್ರಕಾಂತ ಪಾಟೀಲ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಫೆ. 09 : 'ಬೆಳೆಯುವ ಸಿರಿ ಮೊಳಕೆಯಲ್ಲಿ' ಎನ್ನುವಂತೆ ಮಕ್ಕಳನ್ನು ಚಿಕ್ಕಂದಿನಲ್ಲೇ ಸಂಸ್ಕಾರ ನೀಡಿದಾಗ ಮಾತ್ರ ಮುಂದೆ ಭವ್ಯ ಭಾರತದ ಪ್ರಜೆಗಳಾಗುತ್ತಾರೆ ಎಂದು ಶಾಂತಿಕಿರಣ ಶಿಕ್ಷಣ ಹಾಗೂ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಚಂದ್ರಕಾಂತ ಪಾಟೀಲ ತಿಳಿಸಿದರು.

ನಗರದ ಗುಂಪಾ ರಸ್ತೆಯಲ್ಲಿರುವ ಗಣೇಶ ನಗರದಲ್ಲಿರುವ ನರೇಂದ್ರ ಪೂರ್ವ ಶಾಲೆ ಹಾಗೂ ಡೇ ಕೇರ್ ಶಾಲೆಯ ಪ್ರಥಮ ವಾರ್ಷಿಕೋತ್ಸವವನ್ನು ಉದ್ಘಾಟಿಸಿ ಮಾತನಾಡಿದರು.

ಮುಖ್ಯ ಅತಿಥಿಗಳಾದ ಮುಖಂಡರಾದ ಪ್ರಭುಶೆಟ್ಟಿ ಬುಳ್ಳಾ ಮಾತನಾಡಿ ನರೇಂದ್ರ ಡೇ ಕೇರ್ ಶಾಲೆಯಲ್ಲಿ ಮಕ್ಕಳಿಗೆ ಉತ್ತಮ ಶಿಕ್ಷಣ, ನೃತ್ಯ, ಸಂಸ್ಕಾರ ನೀಡುತ್ತಿರುವುದು ಶ್ಲಾಘನೀಯ ಕಾರ್ಯ ಎಂದರು.

ಪುಟ್ಟ ಪುಟ್ಟ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಗಳು ಸಭೀಕರ ಮನತಣಿಸುವಂತೆ ಮಾಡಿತು. ವೇದಿಕೆ ಮೇಲೆ ಅಧ್ಯಕ್ಷತೆಯನ್ನು ಸಂಸ್ಥೆಯ ಕಾರ್ಯದರ್ಶಿ ಅಭಿಷೇಕ ಪಾಟೀಲ ವಹಿಸಿದ್ದರು. ಸಾವಿತ್ರಿಬಾಯಿ ಫುಲೆ ಶಿಕ್ಷಕಿಂ–ಯರ ಸಂಘದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಡಾ. ಶಾಂತಾಬಾಯಿ ಎಸ್.ಬಿರಾದಾರ, ಪ್ರಮುಖರಾದ ರವಿ ಮುದ್ದಾ, ಪಾಂಡುರಂಗ ಪಾಂಚಾಳ, ಸೂರ್ಯಕಾಂತ ಯಕತಪುರೆ, ಅಶೋಕ ಹೆಬ್ಬಾಳೆ, ಬಬಿತಾ ಪಾಟೀಲ, ಸುಪ್ರಿಯಾ ಪಾಟೀಲ ಹಾಗೂ ಇತರರಿದ್ದರು.

## ಉಜ್ವಲ ಭವಿಷ್ಯಕ್ಕೆ ಕೌಶಲ ಬೆಳೆಸಿಕೊಳ್ಳಿ



ಬೀದರ. ಫೆ. 09 :ಉಜ್ವಲ ಭವಿಷ್ಯಕ್ಕೆ ಯುವ ಜನರು ಜ್ಞಾನದ ಜತೆಗೆ ಕೌಶಲ ಬೆಳೆಸಿಕೊಳ್ಳಬೇಕು ಎಂದು ಗುರುನಾನಕ ಪದವಿ ಕಾಲೇಜಿನ ಪ್ರಾಚಾರ್ಯೆ ಡಾ. ಶಾಮಲಾ ದತ್ತಾ ಹೇಳಿದರು. ನಗರದ ಸಂಸ್ಕೃತಿ ಕೌಶಲ ಅಭಿವೃದ್ಧಿ ಕೇಂದ್ರದಲ್ಲಿ ಶನಿವಾರ ಹಮ್ಮಿಕೊಂಡಿದ್ದ 50ನೇ ತಂಡದ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೌಶಲಕ್ಕೆ ಈಗ ಬಹು ಬೇಡಿಕೆ ಇದೆ ಎಂದು ತಿಳಿಸಿದರು. ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಸಮಾಜ ಕಲ್ಯಾಣ ಇಲಾಖೆಯಲ್ಲಿ ಅನೇಕ ಯೋಜನೆಗಳು ಇವೆ. ವಿದ್ಯಾರ್ಥಿಗಳು ಅವುಗಳ ಪ್ರಯೋಜನ ಪಡೆಯಬೇಕು ಎಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಅನಿಲಕುಮಾರ ಮೇಲ್ದೊಡ್ಡಿ ಹೇಳಿದರು.

ಕೇಂದ್ರದಿಂದ ಈವರೆಗೆ 1,500 ಮಂದಿಗೆ ಕೌಶಲ ತರಬೇತಿ ನೀಡಲಾಗಿದೆ ಎಂದು ಕೇಂದ್ರದ ಅಧ್ಯಕ್ಷ ಶರಣು ಕೋಟೆ ತಿಳಿಸಿದರು.

ವಿ ಆರ್ ವಂಡರ್ಸ್ ಶಾಲೆಯ ನಿರ್ದೇಶಕಿ ಅಶ್ವಿನಿ, ತರಬೇತುದಾರರಾದ ವಾಣಿ, ಜಾನ್ಸನ್, ರೀಟಾ, ಮಲ್ಲಿಕಾರ್ಜುನ, ನಾಗೇಶ, ಸಂತೋಷ್ ರೆಡ್ಡಿ ಮತ್ತಿತರರು ಇದ್ದರು.

## ಫೆ. 12 ರಂದು ಸನ್ನತಿ ಕನಗನಹಳ್ಳಿಯಲ್ಲಿ ತ್ರಿಪೀಠಕ ಪಠಣ ಕಾರ್ಯಕ್ರಮ

### ದೇಶ ವಿದೇಶದಿಂದ 108 ಬೌದ್ಧ ಭಿಕ್ಕುಗಳು ಭಾಗಿ: ಭಂತೆ ಜ್ಞಾನಸಾಗರ ಥೆರೋ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಫೆ. 09 : ದಕ್ಷಿಣ ಭಾರತದ ಇತಿಹಾಸದಲ್ಲಿ ಪ್ರಪ್ರಥಮ ಬಾರಿಗೆ ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲೂಕಿನ ಸನ್ನತಿಯಲ್ಲಿ ಸದ್ಧಮ ಸಜ್ಜಾಯನ ಪವಿತ್ರ ತ್ರಿಪೀಠಕ ಪಠಣ ನಡೆಯುತ್ತಿದ್ದು, ವಿಶ್ವಶಾಂತಿಗಾಗಿ ಹಾಗೂ ಭ್ರಾತೃತ್ವದ ಸಂದೇಶ ಸಾರಲು ನಡೆಯುತ್ತಿರುವ ಈ ಭವ್ಯ ಕಾರ್ಯಕ್ರಮದಲ್ಲಿ ಸರ್ವ ಬೌದ್ಧ ಉಪಾಸಕ ಉಪಾಸಕಿಯರು ತಪ್ಪದೇ ಪಾಲ್ಗೊಳ್ಳಬೇಕೆಂದು ಆಣದೂರ ವೈಶಾಲಿ ನಗರದ ಪೂಜ್ಯ ಭಂತೆ ಜ್ಞಾನಸಾಗರ ಥೆರೋ ತಿಳಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ರವಿವಾರ ಕ–ರೆದ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ಈ ಪಠಣವು ಮಹಾಬೋಧಿ ಸೊಸೈಟಿ ಬೆಂಗಳೂರು, ಲೈಟ್ ಆಫ್ ದಿ ಬುದ್ಧ ಧರ್ಮ ಪ್ರತಿಷ್ಠಾನ, ಅಂತರಾಷ್ಟ್ರೀಯ ತ್ರಿಪೀಠಕ ಪರಿಷತ್ತು ಮತ್ತು ಬೌದ್ಧ ಮಹಾಸ್ತೂಪ ಅಭಿವೃದ್ಧಿ ಸಂರಕ್ಷಣಾ ಸಮಿತಿ ಸನ್ನತಿ ಇವರುಗಳ ಸಂಯುಕ್ತಾಶ್ರಯದಲ್ಲಿ ನಡೆಯುತ್ತಿದ್ದು, ಈ ಕಾರ್ಯಕ್ರಮದಲ್ಲಿ ಜಪಾನ್, ಶ್ರೀಲಂಕಾ, ಮ್ಯಾನ್ಮಾರ್ ಮತ್ತು ಥೈಲ್ಯಾಂಡ್ ಸೇರಿದಂತೆ ಹಲವಾರು ದೇಶಗಳಿಂದ ಒಟ್ಟು 108 ಬೌದ್ಧ ಭಿಕ್ಕುಗಳು ಆಗಮಿಸುತ್ತಿದ್ದಾರೆ. ಸುಮಾರು 2500 ವರ್ಷಗಳ ನಂತರ ಮತ್ತೊಮ್ಮೆ ಪವಿತ್ರ ತ್ರಿಪೀಠಕ ಬುದ್ಧನ ಬೋಧನೆಗಳನ್ನು ಮತ್ತು ಅದರ ಮೂಲ ಪಾಲಿ ಭಾಷೆಯಲ್ಲಿ ಪಠಿಸಲಾಗುತ್ತಿದೆ. ಕಾರ್ಯಕ್ರಮದಲ್ಲಿ 20 ಸಾವಿರಕ್ಕೂ ಹೆಚ್ಚು ಜನರು ಸೇರುವ ನಿರೀಕ್ಷೆಯಿದೆ ಎಂದು ಪ್ರತಿಪಾದಿಸಿದರು.

ಬಿ.ಎಸ್.ಪಿ. ಜಿಲ್ಲಾಧ್ಯಕ್ಷ ಕಪಿಲ್ ಗೋಡಬೋಲೆ ಮಾತನಾಡಿ ಬೆಂಗಳೂರಿನ ಭಂತೆ ಬೋಧಿದತ್ತ ಅವರು 2024ರ ನವೆಂಬರ್ 15 ರಿಂದ ಸನ್ನತಿಯಿಂದ ಬೆಂಗಳೂರು ವರೆಗೆ 800 ಕಿ.ಮೀ. ಪಾದಯಾತ್ರೆ ಮಾಡಿ ಸನ್ನತಿ ಕ್ಷೇತ್ರದ ಅಭಿವೃದ್ಧಿಗಾಗಿ ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಅವರಿಗೆ ಬೆಂಗಳೂರು ಫ್ರೀಡಂ ಪಾರ್ಕ್‌ನಲ್ಲಿ ಮನವಿ ಕೂಡ ಸಲ್ಲಿಸಿದ್ದಾರೆ. ಅದರ ಮುಂದುವರೆದ ಭಾಗವಾಗಿ ಸನ್ನತಿಯಲ್ಲಿ ತ್ರಿಪೀಠಕ ಪಠಣ ನಡೆಯುತ್ತಿದೆ ಎಂದು ತಿಳಿಸಿದರು.

ಬಿ.ಎಸ್.ಪಿ. ಪಕ್ಷದ ಜಿಲ್ಲಾ ಉಪಾಧ್ಯಕ್ಷ ಡಾ. ಸಚಿನ ಗಿರಿ ಮಾತನಾಡಿ ಸನ್ನತಿ ಕ್ಷೇತ್ರದ ಸಮೀಪ ನಾಗಲಾಂಬಾ ಎಂಬ ಮಂದಿರ ಸ್ಥಾಪಿಸಿ ಪೂಜಿಸಲಾಗುತ್ತಿದೆ. ಆದರೆ ಅದು ಮೊದಲು ಅಶೋಕ ಸಾಮ್ರಾಟ್ ಅವರ ಅವಧಿಯಲ್ಲಿ ನಾಗಲಾಮಾ ಎಂಬ ಹೆಸರಿನಲ್ಲಿ ಒಂದು ವಿಶ್ವವಿದ್ಯಾಲಯವಿತ್ತು. ಸಾಮ್ರಾಟ್ ಅಶೋಕ ಸ್ಥಾಪಿಸಿರುವ 84 ಸಾವಿರ ಸ್ತೂಪಗಳಲ್ಲಿ ಸನ್ನತಿಯಲ್ಲಿ ಸ್ಥಾಪಿಸಿರುವ ಒಂದು ಸ್ತೂಪದಲ್ಲಿ ದೇವನಾಂಪ್ರಿಯ ಅಶೋಕ ಎಂಬ ಹೆಸರಿದೆ. ಈ ಕುರಿತು ಸಾಕಷ್ಟು ಪುರಾವೆಗಳು ಸಿಕ್ಕಿವೆ. ಹೀಗಾಗಿ ಸನ್ನತಿಯ ಒಟ್ಟು 200 ಎಕರೆ ಜಮೀನು ಸಂಪೂರ್ಣ ಬೌದ್ಧ ಧರ್ಮದ ಪವಿತ್ರ ಕ್ಷೇತ್ರವಿದ್ದು ಇದರ ಅಭಿವೃದ್ಧಿಗೆ ಸರ್ಕಾರ ನೂರು ಕೋಟಿ ಅನುದಾನ ಬಿಡುಗಡೆ ಮಾಡಬೇಕು. ಒಂದು ವೇಳೆ ಮಾಡದಿದ್ದರೆ ಸರ್ಕಾರದ ನಿಯಮಾವಳಿ ಪ್ರಕಾರ ವಿದೇಶದ ಬೌದ್ಧ ಭಿಕ್ಕುಗಳು ನೀಡುವ ಧನಸಹಾಯ ಪಡೆದು, ಸನ್ನತಿ ಕ್ಷೇತ್ರದ ಅಭಿವೃದ್ಧಿಯನ್ನು ಶಾಂತಿಯಿಂದ ಮಾಡಲಾಗುವುದು ಎಂದು ಸ್ಪಷ್ಟಪಡಿಸಿದರು.

ಪೂಜ್ಯ ಭಂತೆ ಶಾಂತಪಾಲ ಆಣದೂರ, ಬಿ.ಎಸ್.ಪಿ. ಪಕ್ಷದ ಜಿಲ್ಲಾ ಉಸ್ತುವಾರಿ ರಾಹುಲ ಖಂದಾರೆ ಮಾತನಾಡಿದರು. ಭೀಮ್ ಆರ್ಮಿ ಕಾರ್ಯದರ್ಶಿ ಹರ್ಷಿತ್ ದಾಂಡೇಕರ್, ಪ್ರಮುಖರಾದ ಸತೀಶ ದೊಡ್ಡಿ, ಸುಭಾಷ ಲಾಧಾ ಸೇರಿದಂತೆ ಅನೇಕರು ಹಾಜರಿದ್ದರು.

# ನಿಜಾಂನ ಆಳ್ವಿಕೆಯಲ್ಲಿ ಕನ್ನಡ ಕಟ್ಟಿದ ಪಟ್ಟದ್ದೇವರು:ಸಚಿವ ಖಂಡ್ರೆ







ಈ ಭಾಗದಲ್ಲಿ ಮಹಾದೇವಮ್ಮ ತಾಯಿ ಅವರು ಬಸವತತ್ವದ ಅನುಯಾಯಿ ಆಗಿ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರ ಮಾರ್ಗದರ್ಶನದಲ್ಲಿ ಪ್ರವಚನ, ಸಂಗೀತ, ಸಾಹಿತ್ಯದ ಮೂಲಕ ಧರ್ಮವನ್ನು ಕಟ್ಟುವ ಕೆಲಸ ಮಾಡುತ್ತಿರುವುದು ಹೆಮ್ಮೆ ತರಿಸಿದೆ.

**– ಗುರುಬಸವ ಪಟ್ಟದ್ದೇವರು ಹಿರೇಮಠ ಸಂಸ್ಥಾನ ಭಾಲ್ಕಿ**

ನಾವು ನಿಜವಾದ ದೇವರನ್ನು ನೋಡಿಲ್ಲ ಆದರೆ ಶತಾಯುಷಿ ಡಾ.ಚನ್ನಬಸವ ಪಟ್ಟದ್ದೇವರ ರೂಪದಲ್ಲಿ ಚಲಿಸುವ ದೇವರನ್ನು ಕಂಡಿದ್ದೇವೆ. ಅಂತಹ ಮಹಾತ್ಮರು ಜನಸಿದ ಭೂಮಿಯಲ್ಲಿ ನಾವೆಲ್ಲರೂ ಇರುವುದು ಹೆಮ್ಮೆಯ ಸಂಗತಿ.

**– ಈಶ್ವರ ಖಂಡ್ರೆ ಜಿಲ್ಲಾ ಉಸ್ತುವಾರಿ ಸಚಿವರು ಬೀದರ್**

ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ಫೆ.9:ನಿಜಾಂನ ಆಳ್ವಿಕೆಯಲ್ಲಿಕನ್ನಡಭಾಷೆಯನ್ನು ಉಳಿಸಿ ಬೆಳೆಸಿದ ಶ್ರೇಯಸ್ಸು ಶತಾಯುಷಿ ಡಾ.ಚನ್ನಬಸವ ಪಟ್ಟದ್ದೇವರಿಗೆಸಲ್ಲುತ್ತದೆಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಹೇಳಿದರು.

ಹಿರೇಮಠಸಂಸ್ಥಾನಭಾಲ್ಕಿ ವತಿಯಿಂದ ತಾಲೂಕಿನ ಖೇಡ–ಸಂಗಮ ಗ್ರಾಮದ ನೀಲಾಂಬಿಕಾ ಆಶ್ರಮದಲ್ಲಿ ಭಾನುವಾರ ಆಯೋಜಿಸಿದ್ದ ಶತಾಯುಷಿ ಡಾ.ಚನ್ನಬಸವ ಪಟ್ಟದ್ದೇವರಮೂರ್ತಿಅನಾವರಣ ಹಾಗೂಮಹಾದೇವಮ್ಮತಾಯಿ ಕುರಿತ ದೀವ್ಯಾಂಗ ದೀಪ್ತಿ ಅಭಿನಂದನಾ ಗ್ರಂಥ ಮತ್ತು ಮನೆಯಲ್ಲಿಮಹಾಮನೆಬೆಳ್ಳಿ ಹಬ್ಬಸಮಾರಂಭಉದ್ಘಾಟಿಸಿ ಅವರು ಮಾತನಾಡಿದರು.

ನಿಜಾಂನ ಆಡಳಿತದ ಸಂದರ್ಭದಲ್ಲಿಉರ್ದುಭಾಷೆಯ ಪ್ರಭಾವದಲ್ಲಿಯುಹೊರಗಡೆ ಉರ್ದು ನಾಮಫಲಕ ಹಾಕಿ ಒಳಗಡೆ ಕನ್ನಡ ಕಲಿಸುವ ಸಾಹಸ ಮಾಡಿ ಪೂಜ್ಯರು ಭಾಷೆಯಪ್ರೇಮಮೆರೆದಿದ್ದರು.

ಗಡಿಭಾಗದ ಸ್ವತಂತ್ರಕ್ಕಾಗಿ ರೈಲರೋಕೋದಂತಹಚಳವಳಿ ಹಮ್ಮಿಕೊಂಡಿದ್ದರು.ಧಾರ್ಮಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಸೇವೆ ಮೂಲಕ ಈ ಭಾಗಕ್ಕೆ ಅದ್ಭುತಕೊಡುಗೆನೀಡಿದ್ದಾರೆ.

ಹಿಂದುಳಿದ ಭಾಗದ ಅಭಿವೃದ್ಧಿಗೆಶಿಕ್ಷಣವೇಮೂಲ ಎಂದರಿತು ಶಾಂತಿವರ್ಧಕ ಶಿಕ್ಷಣ ಸಂಸ್ಥೆ ಸ್ಥಾಪಿಸಿದರು. ಪೂಜ್ಯರ ಆಶೀರ್ವಾದ ಮತ್ತು ಶತಾಯುಷಿಡಾ.ಭೀಮಣ್ಣಖಂಡ್ರೆ ಅವರ ಪರಿಶ್ರಮದಿಂದ ಶಿಕ್ಷಣ ಸಂಸ್ಥೆ ಹೆಮ್ಮರವಾಗಿ ಬೆಳೆದಿದೆ.

ಈ ಸಂಸ್ಥೆಯಲ್ಲಿ ಕಲಿತ ವಿದ್ಯಾರ್ಥಿಗಳು ರಾಜ್ಯ ಮತ್ತು ರಾಷ್ಟ್ರ ಕಟ್ಟುವ ಕಾರ್ಯದಲ್ಲಿ ನಿರತರಾಗಿದ್ದಾರೆ ಎಂದು ಹೆಮ್ಮೆ ವ್ಯಕ್ತಪಡಿಸಿದರು.

ಶತಾಯುಷಿಡಾ.ಚನ್ನಬಸವ ಪಟ್ಟದ್ದೇವರ ದಾರಿಯಲ್ಲೇ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಸಾಗುತ್ತಿದ್ದು ಅವರು ಕೂಡ ರಾಜ್ಯದ ಒಳಗೂ ಮತ್ತು ಹೊರಗೂ ಬಸವತತ್ವವನ್ನು ಪಸರಿಸುವ ಕೆಲಸ ಮಾಡುತ್ತಿದ್ದಾರೆ. ಜತೆಗೆ ಶಿಕ್ಷಣ ಸಂಸ್ಥೆಯನ್ನು ಕಟ್ಟಿ ಈ ಭಾಗದಶೈಕ್ಷಣಿಕಪ್ರಗತಿಗೆವಿಶಿಷ್ಟ ಕೊಡುಗೆನೀಡುತ್ತಿದ್ದಾರೆಎಂದು ಮೆಚ್ಚುಗೆ ವ್ಯಕ್ತ ಪಡಿಸಿದರು.

ದಿವ್ಯ ಸಾನ್ನಿಧ್ಯ ವಹಿಸಿದ ಬಸವಕಲ್ಯಾಣ ಅನುಭವ ಮಂಟಪದ ಅಧ್ಯಕ್ಷನಾಡೋಜ ಡಾ.ಬಸವಲಿಂಗಪಟ್ಟದ್ದೇವರು ಮಾತನಾಡಿ, ಶತಾಯುಷಿ ಡಾ.ಚನ್ನಬಸವ ಪಟ್ಟದ್ದೇವರ ಆಶೀರ್ವಾದ ಶಕ್ತಿಯಿಂದ ಶ್ರೀಮಠ ಮತ್ತು ಶಿಕ್ಷಣ ಸಂಸ್ಥೆ ಮೂಲಕ ಉತ್ತಮ ಸಮಾಜ ಕಟ್ಟುವ ಪ್ರಯತ್ನ ಮಾಡುತ್ತಿದ್ದೇವೆ.ಪೂಜ್ಯರಮೂರ್ತಿ ಅನಾವರಣಗೊಂಡಿರುವುದು ಸಂತಸ ತರಿಸಿದೆ. ಅವರು ತೋರಿರುವ ಮಾರ್ಗದಲ್ಲಿ ಎಲ್ಲರೂ ನಡೆಯುವ ಪ್ರಯತ್ನ ಮಾಡಬೇಕುಎಂದುತಿಳಿಸಿದರು.

ನೇತೃತ್ವವಹಿಸಿದ ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಮಾತನಾಡಿ, 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರು ಜಾರಿಗೆ ತಂದಿದ್ದ ವಿಚಾರಧಾರೆ, ಚಿಂತನೆಗಳು ಶತಾಯುಷಿ ಡಾ.ಚನ್ನಬಸವ ಪಟ್ಟದ್ದೇವರು ಜೀವನದುದ್ದಕ್ಕೂ ಪಾಲಿಸಿ ಈ ಭಾಗದ ಅಭಿವೃದ್ಧಿಗೆ ವಿಶಿಷ್ಟ ಕೊಡುಗೆನೀಡಿದ್ದಾರೆ ಎಂದು ಸ್ಮರಿಸಿದರು.ದಿವ್ಯ ಸಮ್ಮುಖ ವಹಿಸಿದ ನೀಲಾಂಬಿಕಾ ಆಶ್ರಮದ ಮಹಾದೇವಮ್ಮ ತಾಯಿಮಾತನಾಡಿ,ಯಾವುದೇ ಫಲಾಪೇಕ್ಷೆ ಇಲ್ಲದೇಬಸವತತ್ವದ ಜತೆಗೆಪೂಜ್ಯರುಮಾಡುತ್ತಿರುವ ಸಮಾಜಪರ ಕಾರ್ಯಗಳನ್ನು ಭಕ್ತರಿಗೆಪರಿಚಯಿಸುವಪ್ರಯತ್ನ ಮಾಡುತ್ತಿದ್ದೇನೆ.ಆಶ್ರಮದಲ್ಲಿ ಶತಾಯುಷಿ ಡಾ.ಚನ್ನಬಸವ ಪಟ್ಟದ್ದೇವರಮೂರ್ತಿ ಸ್ಥಾಪನೆ ಮಾಡಬೇಕುಎನ್ನುವುದುಬಹಳ ದಿನಗಳ ಕನಸಾಗಿತ್ತು. ಭಕ್ತರ ಸಹಕಾರದಿಂದಈಡೇರಿರುವುದು ಸಂತಸ ತರಿಸಿದೆ ಎಂದು ತಿಳಿಸಿದರು.

ಜಿಲ್ಲಾ ವಚನ ಸಾಹಿತ್ಯ ಪರಿಷತ್ತು ಅಧ್ಯಕ್ಷೆ ಸುನಿತಾ ದಾಡಗೆ ಗ್ರಂಥ ಪರಿಚಯ ಮಾಡಿಕೊಟ್ಟರು.ಕಾರ್ಯಕ್ರಮದ ಸ್ವಾಗತಸಮಿತಿಅಧ್ಯಕ್ಷೆವರ್ಷಾ ಓಂಪ್ರಕಾಶಬಿರಾದಾರ್ ಅಧ್ಯಕ್ಷತೆ ವಹಿಸಿದರು.

ಹುಲಸೂರುಗುರುಬಸವೇಶ್ವರ ಸಂಸ್ಥಾನ ಮಠದ ಶಿವಾನಂದ ಸ್ವಾಮೀಜಿ ನೇತೃತ್ವ ವಹಿಸಿ ಮಾತನಾಡಿದರು.ಮಲ್ಲಿಕಾರ್ಜುನ ದಾನಾ ಬಸವ ಗುರುವಿನ ಪೂಜೆ ನೆರವೇರಿಸಿದರು.

ಕೋಡ್ಲಾಮಠದಶಂಭುಲಿಂಗ ಶಿವಾಚಾರ್ಯರು ಸಮ್ಮುಖ ವಹಿಸಿದರು.ಈಸಂದರ್ಭದಲ್ಲಿ ಶಾಂತಿವರ್ಧಕಶಿಕ್ಷಣಸಂಸ್ಥೆಯ ನಿರ್ದೇಶಕಿ ಡಾ.ಗೀತಾ ಈಶ್ವರ ಖಂಡ್ರೆ,ಭಾಲ್ಕಿಯ ಸ್ತ್ರೀರೋಗ ತಜ್ಞೆಡಾ.ಶೈಲಜಾ ತಳವಾಡೆ, ಭಾಲ್ಕಿ ತಾಲೂಕು ಕಾಂಗ್ರೆಸ್ ಅಧ್ಯಕ್ಷ ಹಣಮಂತರಾವ ಚವ್ಹಾಣ, ಹಿರಿಯ ಮುಖಂಡ ಡಾ.ಭೀಮಸೇನ ಸಿಂಧೆ, ಯುವ ಮುಖಂಡ ಪ್ರಕಾಶ ಟೋಣ್ಣೆ,ಖೇಡಗ್ರಾಪಂಅಧ್ಯಕ್ಷ ಹಣಮಂತದಾನಾ,ಓಂಪ್ರಕಾಶ ಬಿರಾದಾರ್, ಭಾರತೀಯ ಬಸವ ಬಳಗದ ಜಿಲ್ಲಾಧ್ಯಕ್ಷ ಡಾ.ಸಂಜುಕುಮಾರಜುಮ್ಮಾ, ಜಿಲ್ಲಾಶರಣ ಸಾಹಿತ್ಯಪರಿಷತ್ತು ಅಧ್ಯಕ್ಷಶಂಭುಲಿಂಗ ಕಾಮಣ್ಣ, ಡಾ.ರಘುಶಂಖ ಭಾತಂಬ್ರಾ, ಸಿದ್ದಯ್ಯಕಾವಡಿಮಠ,ವಿಶ್ವನಾಥಪ್ಪ ಬಿರಾದಾರ್ ಸೇರಿದಂತೆ ಹಲವರು ಇದ್ದರು. ಲೋಕನಾಥ ಚಾಂಗ್ಲೆರಾ ಸಂಗಡಿಗರು ವಚನ ಸಂಗೀತ ನಡೆಸಿ ಕೊಟ್ಟರು. ನೀಲಕಂಠ ಬಿರಾದಾರ್ ಸ್ವಾಗತಿಸಿದರು. ನವಲಿಂಗ ಪಾಟೀಲ್ ನಿರೂಪಿಸಿದರು. ವೀರೇಂದ್ರ ಬಿರಾದಾರ್ ವಂದಿಸಿದರು.

ದಿವ್ಯಾಂಗ ದೀಪ್ತಿ ಗ್ರಂಥ ಲೋಕಾರ್ಪಣೆ:ಇದೇವೇಳೆ ಮಹಾದೇವಮ್ಮ ತಾಯಿ ಕುರಿತು ನಾಡೋಜ ಡಾ.ಬಸವಲಿಂಗಪಟ್ಟದ್ದೇವರ ಗೌರವ ಸಂಪಾದಕ ಮತ್ತು ಹಿರಿಯಸಾಹಿತಿರಘುಶಂಖ ಭಾತಂಬ್ರಾಸಂಪಾದಕತ್ವದಲ್ಲಿ ಹೊರತಂದ ದೀವ್ಯಾಂಗ ದೀಪ್ತಿ ಗ್ರಂಥ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ನಿರ್ದೇಶಕಿ ಡಾ.ಗೀತಾ ಈಶ್ವರ ಖಂಡ್ರೆ ಲೋಕಾರ್ಪಣೆಗೊಳಿಸಿದರು. ಜತೆಗೆ ವಿವಿಧ ಪುಸ್ತಕ ಬಿಡುಗಡೆಗೊಂಡವು.

ವಿಶೇಷ ಸನ್ಮಾನ:ಯಾದಗಿರಿ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣಾಧಿಕಾರಿ ಡಾ.ಮಹೇಶ ಬಿರಾದಾರ್,ಬೀದರ್ ಹೃದಯ ರೋಗ ತಜ್ಞ ಡಾ.ಸಚಿನ ಗುದಗೆ, ಡಾ.ಧನರಾಜ ರಾಗಾ, ಡಾ.ವಿಕ್ರಮ ಮತ್ತು ಡಾ.ರಾಜೇಂದ್ರಮಾಣಿಕರಾವ ಧನ್ನೆ ವಿಶೇಷವಾಗಿ ಸನ್ಮಾನಿಸಿ, ಗೌರವಿಸಲಾಯಿತು.

ದಾಸೋಹ ರತ್ನ ಪ್ರಶಸ್ತಿ ಪ್ರದಾನ:ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ದಂಪತಿ, ಮಹನಿಯರನ್ನು ದಾಸೋಹ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಡಾ.ಗೀತಾ ಈಶ್ವರ ಖಂಡ್ರೆ, ಡಾ.ಶೈಲಜಾ ಡಾ.ಅನಿಲಕುಮಾರತಳವಾಡೆ, ಜ್ಯೋತಿಸೂರ್ಯಕಾಂತಅಲ್ಮಜೆ, ವಿದ್ಯಾವತಿ ಸೋಮನಾಥಪ್ಪ ಅಷ್ಟೂರೆ, ಉಮಾ ಕೊಳ್ಳೆ, ವೈಷ್ಣವಿ ವಿಕಾಸ ಧಗವಾಲೆ, ಶುಭಾಂಗಿ ಚನ್ನಬಸವ ಬಳತೆ ಮತ್ತು ಸುನಿತಾ ಶಂಭುಲಿಂಗ ಪಾಟೀಲ್ ಅವರನ್ನು ಪ್ರಶಸ್ತಿ ಪ್ರದಾನ ಮಾಡಲಾಯಿತು..

ವೈಭವದಮೆರವಣಿಗೆ:ಶತಾಯುಷಿ ಡಾ.ಚನ್ನಬಸವ ಪಟ್ಟದ್ದೇವರು ಮೂರ್ತಿ ಅನಾವರಣಕ್ಕೂ ಮುನ್ನವೈಭವದ ಮೆರವಣಿಗೆ ನೆರವೇರಿತು.ವೈಜಿನಾಥರಾಜಗೀರೆ ಷಟಸ್ಥಲ ಧ್ವಜರೋಹಣ ನೆರವೇರಿಸಿದರು. ಸಂಗಮೇಶ್ವರ ಮಂದಿರಆವರಣದಲ್ಲಿವಿಶ್ವಗುರು ಬಸವಣ್ಣನವರಮತ್ತುಶತಾಯುಷಿ ಡಾ.ಚನ್ನಬಸವ ಪಟ್ಟದ್ದೇವರ ಭಾವಚಿತ್ರದ ಮೆರವಣಿಗೆಗೆ ಕಂದಗೂಳ ಗ್ರಾಮದ ಅಕ್ಕನ ಬಳಗದಮಹಿಳೆಯರುಚಾಲನೆ ನೀಡಿದರು.ಅಲ್ಲಿಂದನೀಲಾಂಬಿಕಾ ಆಶ್ರಮದವರೆಗೂಮೆರವಣಿಗೆ ನಡೆಯಿತು.

## ಯುವ ಕಾಂಗ್ರೆಸ್ ಅಧ್ಯಕ್ಷ. ರಾಜಕುಮಾರ್ ನಾಯಕ್‌ಗೆ ಅಭಿಮಾನಿಗಳಿಂದ ಸನ್ಮಾನ



ಮಲ್ಲಮ್ಮ ನುಡಿ ವಾರ್ತೆ

ಸುರಪುರ :ಫೆ.9: ಯಾದಗಿರಿ ಜಿಲ್ಲೆಯ ಯುವ ಕಾಂಗ್ರೆಸ್ ವಿಭಾಗದಅಧ್ಯಕ್ಷರಾಗಿಎರಡನೇ ಬಾರಿಗೆ ಅತ್ಯಂತ ಹೆಚ್ಚಿನ ಮತಗಳಿಂದ ಆಯ್ಕೆಯಾದ ರಾಜಾಕುಮಾರ ನಾಯಕ್ ಮತ್ತು ಕೋ ಆಪರೇಟಿವ್ ಅರ್ಬನ್‌ಬ್ಯಾಂಕ್‌ನಿರ್ದೇಶಕರಾಗಿ ಆಯ್ಕೆಯಾದರಾಜಾ ವಿಜಯ್ ಕುಮಾರ್ ನಾಯಕ್ ಅವರಿಗೆ ಜಿಲ್ಲೆಯ ಕಾರ್ಯಕರ್ತರು ಅಭಿನಂದನಾ ಕಾರ್ಯಕ್ರಮ ಹಮ್ಮಿಕೊಂಡಿದ್ದರು.

ಇಡಿ ಊರಿನ ಜನರೇ ಇವರ ಆಯ್ಕೆ ಸ್ವಾಗತಿಸಿ, ಪಟಾಕಿ ಸಿಡಿಸಿ ಸಿಹಿ ತಿನಿಸಿ ಸಂಭ್ರಮಿಸಿದರು.

ರಾಜಕುಮಾರ ನಾಯ್ಕ್ ಕಾಲದಿಂದಲೂ ರಾಜಾ ವೆಂಕಟಪ್ಪ ನಾಯಕ್ ಧಣಿ ಸುರಪುರವಿಧಾನಸಭಾಕ್ಷೇತ್ರದಲ್ಲಿ ಏಳು ಬಾರಿ ಗೆದ್ದು ಅಗಾಧ ಜನಸೇವೆ ಮಾಡಿದ್ದರು.

ನಾಲ್ಕು ಬಾರಿ ಜಯ ಸಾಧಿಸಿ ಸಾಕಷ್ಟು ಅಭಿವೃದ್ಧಿ ಪಡಿಸಿ ಜನಸೇವೆಗೈಹಿದರು ಅವರ ಸಹೋದರ ರಾಜಾ ರಂಗಪ್ಪ ನಾಯಕ್ ರಾಯಚೂರು ಲೋಕಸಭಾ ಸಂಸದರಾಗಿ ನೇರ ನುಡಿಯ ರಾಜ–ಕಾರಣಿಯಾಗಿ ಸಾಕಷ್ಟ ಕೆಲಸಗಳನ್ನು ಮಾಡಿದ್ದಾರೆ ಎಂದು ಪಕ್ಷದ ಜಿಲ್ಲಾ ಎಸ್ಟಿ ವಿಭಾಗದ ಅಧ್ಯಕ್ಷರಾದ ವೆಂಕಟೇಶ ಬೇಟೆಗಾರ ಸ್ಮರಿಸಿದರು.

ರಾಜಾ ಮೌನೇಶ್ವರ ನಾಯಕ್ ಎಪಿಎಂಸಿ ಅಧ್ಯಕ್ಷರಾಗಿ ಎಲ್ಲರ ಪ್ರೀತಿಗೆ ಪಾತ್ರರಾಗಿ ಹಲವಾರು ಕಾರ್ಯಗಳನ್ನು ಮಾಡಿ ಜನರ ಮನಸ್ಸಿಗೆದಿದ್ದರು .

ರಾಜಾ ರಾಮಪ್ಪ ನಾಯಕ್ ಯೂಥ್ ಐಕಾನ್ ಬಹಳಷ್ಟು ಯುವಕರ ಬಾಳಿಗೆ ದಾರಿ ದೀಪವಾಗಿದ್ದರು

ರಾಜಾ ಮೌನೇಶ್ವರನಾಯಕರ ಸುಪುತ್ರ ಯುತ್ ಅಧ್ಯಕ್ಷರಾದ ರಾಜಕುಮಾರನಾಯಕ್‌ಯುವಕರ ಪ್ರೀತಿಯ ಪಾತರಾಗಿದ್ದಾರೆ ಎಂದು ವೆಂಕಟೇಶ ಬೇಟೆಗಾರ ಶ್ಲಾಘಿಸಿದರು.ಇಂದು ದೇವರ ಗೋನಾಲದ ಮುಖಂಡರಿಂದ ಹಿರಿಯರಿಂದ ಯುವಕರಿಂದ ಗ್ರಾಮ ಪಂಚಾಯಿತಿ ಅಧ್ಯಕ್ಷರು ಸದಸ್ಯರಿಂದ ಎಸ್ಟಿಎಂಸಿ ಅಧ್ಯಕ್ಷರು ಸದಸ್ಯರಿಂದ ಹಾಗೂ ಗ್ರಾಮಸ್ಥರಿಂದ ಶುಭ ಕೋರಿದರು.

## ರೈತ ಕೃಷಿ ಕೂಲಿಕಾರ ವಿಧಾನಸೌಧ ಚಲೋ ಹಾಗೂ ಮಹಾ ಧರಣಿ



ಯಾದಗಿರಿ: ಫೆ.9: ರೈತ ಹಾಗೂಜನವಿರೋಧಿಜಾಗತಿಕ ಬಂಡವಾಳ ಹೂಡಿಕೆದಾರರ ಸಭೆ ವಿರೋಧಿಸಿ.

ಮನೆ ನಿವೇಶನ ಬಗರ್ ಹುಕುಂ ಅರಣ್ಯ ಸಾಗುವಳಿ ರೈತ ಕೂಲಿಕಾರರ ಹಕ್ಕು ರಕ್ಷಣೆಗಾಗಿ. ಸಾಲ ಮನ್ನಾ ಹಾಗೂ ಕನಿಷ್ಠ ಬೆಂಬಲ ಬೆಲೆ ಬೆಲೆಗಾಗಿ. ಗ್ರಾಮೀಣ ಪ್ರದೇಶದಲ್ಲಿ ಮನೆ ನಿವೇಶನ ಒದಗಿಸಲು ಜನಪರ ಭೂ ಸ್ವಾದಿನ ನೀತಿಗೆ ಆಗ್ರಹಿಸಿ. ಶಹಪುರ್ ತಾಲೂಕಿನ ಹೊತ್ತೆ ಪೇಟಿ. ಸೈದಾಪುರ್ ವಿರುಪಾಪುರ್ ಹೊಸಗೇರಿ ಶಟಗೇರಿ ಅಣಬೆ ರಸ್ತಾಪುರ್ ಬೆನಕನಹಳ್ಳಿ ಜೆ ಶಹಪುರ್ ಟೌನ್ ವಿವಿಧ ಹಳ್ಳಿಗಳಿಂದ ರೈತ ಮಹಿಳೆಯರು ಕೃಷಿ ಕೂಲಿಕಾರರುವಿಧಾನಸೌಧಭಲೋ ಹೋರಾಟಕ್ಕೆಮುನ್ನುಡಿದರು. ಜಿಲ್ಲಾಮುಖಂಡರಾದಚೆನ್ನಪ್ಪ ಆನೆಗುಂದಿದೌಲಸಾಬ್‌ನದಾಫ್ ಎಂ ಸಾಗರ್ ತಾಲೂಕು ಮುಖಂಡರಾದ ರಂಗಮ್ಮ ಕಟ್ಟಿಮನಿಭೀಮರಾಯಪೂಜಾರಿ ಭೀಮರಾಯ ತಪ್ಪೇದಾರ್ ದೇವು ಹೊತ್ ಪೇಟೆ ಲಕ್ಷ್ಮಣ ವಿರುಪಾಪುರ್ ದೇವು ಹಳ್ಳಿ. ಗೀತಾ ದೇವಿಂದ್ರ. ಹಾಗೂ ಇತರರಿದ್ದರು

## ಕಾರು ಮತ್ತು ಬೈಕ್ ಗಳ ಮದ್ಯೆ ಮುಖಾ ಮುಖಿ ಡಿಕ್ಕಿ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಫೆ.9: ನಗರದ ವರಹೊಲಯದ ಭೀಮಾ ಬ್ರಿಜ್ ಕಮ್ ಬ್ಯಾರೇಜ್ ಹತ್ತಿರ ಅಪಘಾತ.

ನಿನ್ನೆ ಸಾಯಂಕಾಲ ಹೊರ ವಲಯದ ಭೀಮಾ ಬ್ರಿಜ್ ಹತ್ತಿರ ಕಾರು ಮತ್ತು ಬೈಕ್ ಗಳ ನಡುವೆಅಪಘಾತವಾಗಿದ್ದು ಬೈಕ್ ನಲ್ಲಿದ್ದ ಇಬ್ಬರಿಗೆ ಗಂಭೀರದ ಗಾಯಗಳಾಗಿದೆ.

ಸಾಯಂಕಾಲ 5 ಗಂಟೆಯ ಸುಮಾರಿಗೆಬೈಕ್ ಮತ್ತು ಕಾರಿನ ನಡುವೆ ಅಪಘಾತವಾಗಿದ್ದು ಬೈಕ್ ನಲ್ಲಿದ್ದ ನಾಗರಾಜ್ ತಂದೆ ಶಿವಪ್ಪ ಹಾಗೂ,

ರಮೇಶ್ ತಂದೆ ಮಲಪ್ಪ ಇಬ್ಬರಿಗೆಗಂಭೀರಗಾಯಗಳಗಿದ್ದು ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಅಪಘಾತ ಸಂಭವಿಸಿದ ಸ್ಥಳದಲ್ಲಿ 3 ಗಂಟೆಗಳ ಕಾಲ ಸಂಚಾರಸ್ಥಗಿತವಾಗಿತ್ತುಎಂದು ತಿಳಿದು ಬಂದಿದೆ.ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಧಿಕಾರಿಗಳ ಭೇಟಿ ನಿಡಿದ್ದಾರೆ

## ದೆಹಲಿ ಗೆಲುವಿಗೆ ಮತದಾರರಿಗೆ ಅಭಿನಂದನೆ

ಶಹಾಪುರ:ಫೆ.9:ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಆಮ್ ಆದ್ಮಿ ಪಕ್ಷ ಸರ್ಕಾರದ ಅಧಿಕಾರಾವಧಿಯಲ್ಲಿ ನಡೆದ ಭ್ರಷ್ಟಾಚಾರವನ್ನು ವಿರೋಧಿಸಿ ಅರವಿಂದ ಕೇಜ್ರಿವಾಲ, ಸಿಸೋಡಿಯಾ,ಸತ್ಯೇಂದ್ರಜೈನ್, ಇನ್ನೂ ಹಲವು ಮಂತ್ರಿಗಳನ್ನು ಹೀನಾಯವಾಗಿ ಸೋಲಿಸಿ ಭಾರತೀಯ ಜನತಾ ಪಾರ್ಟಿಗೆ ದೆಹಲಿಯ ಪ್ರಭುದ್ಧ ಮತದಾರರು ಪೂರ್ಣ ಬಹುಮತ ನೀಡಿ ಆಯ್ಕೆ ಮಾಡಿ ಸನ್ಮಾನ್ಯ ಶ್ರೀ ನರೇಂದ್ರ ಮೋದಿಯವರ ಕೈಯನ್ನು ಬಲಪಡಿಸಿದ್ದಕ್ಕಾಗಿ ಅವರಿಗೆ ಬಿಜಪಿ ಮುಖಂಡ ದೇವೇಂದ್ರಕೋನಿಯರ್ ತುಂಬಾ ತುಂಬಾ ಧನ್ಯವಾದಗಳನ್ನು ತಿಳಿಸಿದ್ದಾರೆ,



ಮತ್ತು ಈ ಗೆಲುವಿಗೆ ಕಾರಣಿಭೂತರಾದ,ರಾಷ್ಟ್ರೀಯ ಅಧ್ಯಕ್ಷ ಶ್ರೀ, ಜೆ ಪಿ. ನಡ್ಡಾ ಜೀ, ಶ್ರೀ, ಅಮಿತ್ ಶಾಹ ಜೀ, ಹಾಗು ದೆಹಲಿ ರಾಜ್ಯ ಪದಾಧಿಕಾರಿಗಳು,ಪ್ರತಿಯೊಂದು ಮತಕ್ಷೇತ್ರದ ಪದಾಧಿಕಾರಿಗಳು ಹಿರಿಯ ಮುಖಂಡರು ಕಾರ್ಯಕರ್ತರಿಗೆ ಅಭಿ ನಂದನೆಗಳನ್ನು ತಿಳಿಸಿದ್ದಾರೆ.

## ಜಮಾಆತೆ ಇಸ್ಲಾಮಿ ಹಿಂದ್ ವತಿಯಿಂದ ಕನ್ನಡದಲ್ಲಿ ಕುರಾನ್ ಪ್ರವಚನಕ್ಕೆ ಚಾಲನೆ




ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ:ನಗರದ ಲುಂಬಿನಿ ಪಾರ್ಕ್ ಎದುರುಗಡೆ ಇರುವ ಹಿಡನ್ ಗಾರ್ಡನ್ ನಲ್ಲಿ ಎರಡು ದಿನಗಳ ಕನ್ನಡದಲ್ಲಿ ಕುರಾನ್ ಪ್ರವಚನ ಕ್ಕೆ ಚಾಲನೆ ನೀಡಲಾಯಿತು.

ಜಮಾಆತೆ ಇಸ್ಲಾಮಿ ಹಿಂದ್ ವತಿಯಿಂದಕನ್ನಡದಲ್ಲಿಕುರಾನ್ ಪ್ರವಚನ ಹಮ್ಮಿ ಕೊಂಡಿದ್ದು ಈ ಕಾರ್ಯಕ್ರಮದಲ್ಲಿ ಪ್ರಸಿದ್ಧ ಪ್ರವಚನಕಾರ ಮಹಮದ್ ಕುಂಞ ಅವರು ಕನ್ನಡದಲ್ಲಿ ಕುರಾನ್ ಪ್ರವಚನ ಮಾಡಿದರು.

ಮಾನವನ ಘನತೆ ಎಂಬ ವಿಷಯದ ಕುರಿತು ಪ್ರವಚನ ಮಾಡಿ ಮಾನವನು ಶಿಸ್ತು ಆರೋಗ್ಯ ಸೌಂದರ್ಯ ಇವೆಲ್ಲವೂ ಮಾನವನಿಗೆ ಅತಿ ಮುಖ್ಯವಾಗಿದೆ. ಮಾನವನು ಈ ಯುಗದಲ್ಲಿ ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಅತೀ ಕಡಿಮೆ ಸಮಯದಲ್ಲಿ ಹೋಗುವುದರಿಂದ ಅಂತರ ಕಡಿಮೆಯಾದಂತೆ ಆಗುತ್ತದೆ, ವಚನಗಳನ್ನು ಕೇಳುವುದರಿಂದ ಅಪನಂಬಿಕೆಗಳು ತಪ್ಪು ಕಲ್ಪನೆಗಳು ದೂರವಾಗುತ್ತದೆ, ಇದರಿಂದ ಒಳ್ಳೆಯ ತಿಳುವಳಿಕೆಗಳು ಸಿಗುವುದಾದರೆ ನಾವೆಲ್ಲರೂ ಒಟ್ಟಿಗೆ ಕುಳಿತು ಗೀತೆಯನ್ನು, ಬಸವಣ್ಣನ ವಚನಗಳನ್ನು ಆಲಿಸುವುದಾದರೆ ನಮ್ಮ ಮನಸ್ಸು ಸ್ವಚ್ಛ ಆಗುತ್ತದೆ ನಮ್ಮ ಹೃದಯ ಬಹಳ ಬಲಿಷ್ಠ ಆಗುತ್ತದೆ ಸಂಬಂಧಗಳೆಲ್ಲ ಬಹಳ ದುರ್ಬಲವಾಗಿರುವ ಕಾಲದಲ್ಲಿ ನಾವು ಬದುಕುತ್ತಿದ್ದೇವೆ.

ಮನುಷ್ಯರು ದೇವನ ಸೃಷ್ಟಿಯಾಗಿದ್ದು, ಮಾನವನು ತನ್ನ ಸೃಷ್ಟಿಕರ್ತನನ್ನು ಅರಿತು ಅವನ ಇಚ್ಛೆಗೆ ಅನುಸಾರವಾಗಿ ಜೀವನ ಸಾಗಿಸಿದರೆ ಮಾತ್ರ ಅವನು ಇಹದಲ್ಲಿ ಶಾಂತಿ, ನೆಮ್ಮದಿ, ಸುಭಿಕ್ಷೆ ಮತ್ತು ಕಲ್ಯಾಣವನ್ನು ಹೊಂದುವನು. ಮಾತ್ರವಲ್ಲದೇ ಮರಣಾ ನಂತರ ಸಿಗುವ ಶಾಶ್ವತ ಪರಲೋಕದಲ್ಲೂ ಮೋಕ್ಷ ಮತ್ತು ಯಶಸ್ಸು ಪಡೆಯುವನು ಎಂದು ಜಮಾತ್ ನಂಬಿದೆ ಎಂದರು.

ಜೊತೆಗೆ,ನಮ್ಮಲ್ಲಿಪ್ರತಿಯೊಬ್ಬನೂ ಈ ಜಗತ್ತಿನಲ್ಲಿ ಸಂತೃಪ್ತ ಜೀವನವನ್ನು ಸಾಗಿಸಲು ಮತ್ತು ತನ್ನ ಜೀವನವು ಆರ್ಥಿಕ, ದೈಹಿಕ ಮತ್ತು ಆಧ್ಯಾತ್ಮಿಕವಾಗಿ ತೃಪ್ತಿಕರವಾಗಿರಲಿ ಎಂದು ಬಯಸುತ್ತಾನೆ. ಆದರೆ, ಜೀವನದಲ್ಲಿಸಂತೋಷವಾಗಿರಲು ತನ್ನ ಕರ್ತವ್ಯವೇನೆಂಬುದನ್ನು ಮಾತ್ರ ಮನುಷ್ಯ ಮರೆತಿದ್ದಾನೆ. ಪ್ರಪಂಚದಲ್ಲಿ ನಾವು ಸುಖ–ಶಾಂತಿಯಿಂದ ಬಾಳಬೇಕಾದರೆ ಇತರರ ಜೀವನ, ಘನತೆ ಮತ್ತು ಹಕ್ಕುಗಳನ್ನು ಗೌರವಿಸಬೇಕಾದುದು ಅತ್ಯವಶ್ಯಕ ಎಂದು ಹೇಳಿದರು.

ಇಂದು ಮನುಷ್ಯನು ತನ್ನ ಕರ್ಮಗಳಿಂದ, ತನ್ನ ನಡವಳಿಕೆಯಿಂದ, ತನ್ನ ರೀತಿ ನೀತಿಗಳಿಂದ ಸ್ವತಃ ತನ್ನನ್ನು ತಾನೇ ಸಂಕಷ್ಟಕ್ಕೆ ಸಿಲುಕಿಸಿಕೊಂಡಿದ್ದಾನೆ. ಅವನು ತನ್ನ ಸ್ವಾರ್ಥಕ್ಕಾಗಿ ಇತರರ ಹಕ್ಕುಗಳನ್ನು ಕಸಿಯುತ್ತಿದ್ದಾನೆ. ತನ್ನ ಸ್ವಂತ ಲಾಭಕ್ಕಾಗಿ ಇತರರ ಜೀವನ ಮತ್ತು ಆಸ್ತಿಗಳಿಗೆ ಹಾನಿಯನ್ನುಂಟು ಮಾಡುತ್ತಿದ್ದಾನೆ. ಈ ರೀತಿ ಪ್ರತಿಯೊಬ್ಬ ವ್ಯಕ್ತಿಯು ಪರಸ್ಪರರ ಜೀವನ ಮತ್ತು ಆಸ್ತಿಯನ್ನು ಕಬಳಿಸುತ್ತಾ ಇತರರ ಮಾನ, ಗೌರವ ಮತ್ತು ಘನತೆಗಳ ಮೇಲೆ ಅಕ್ರಮವೆಸಗುತ್ತಿದ್ದಾನೆ. ಇದರ ಪರಿಣಾಮವಾಗಿ ಪ್ರತಿಯೊಬ್ಬರೂ ಜೀವನದಲ್ಲಿ ಸಂತೋಷಮತ್ತುತೃಪ್ತಿಯಿಂದ ವಂಚಿತರಾಗುತ್ತಿದ್ದಾರೆ. ಜೊತೆಗೆ, ಶಾಂತಿ ಮತ್ತು ನೆಮ್ಮದಿಗಾಗಿ ತಡಕಾಡುತ್ತಿದ್ದಾರೆ ಎಂದು ಜೀವನ ಮಾರ್ಗದ ಬಗ್ಗೆ ತಿಳಿಸಿಕೊಟ್ಟರು.ಕುರಾನ್ ಪ್ರವಚನದ ಮೂಲಕ ಮನುಷ್ಯರನ್ನು ತಿಳುವಳಿಕೆಯ ಮೂಲಕ ಪರಸ್ಪರ ನಿಕಟಗೊಳಿಸುವ ಕೆಲಸವನ್ನು ಜಮಾಅತೆ ಇಸ್ಲಾಮಿ ಹಿಂದ್ ಬಹಳ ಪ್ರಾಮಾಣಿಕವಾಗಿ ಮಾಡುತ್ತಾ ಇದೆ ಖಂಡಿತವಾಗಿ ನಮ್ಮ ಮಕ್ಕಳು ಒಳ್ಳೆಯ ಮಕ್ಕಳಾಗುತ್ತಾರೆ ಅವರು ಈ ದೇಶದ ಅತ್ಯಂತ ಒಳ್ಳೆಯ ಸತ್ಪ್ರಜೆಗಳಾಗುತ್ತಾರೆ ಎಂದು ಹೇಳಿದರು.

ಈ ಕಾರ್ಯಕ್ರಮದ ಸಾನಿಧ್ಯವನ್ನು ಶ್ರೀ ಹವಾ ಮಲ್ಲಿನಾಥ್ ಮಹಾರಾಜ್ ವಹಿಸಿದ್ದು,

ಈಸಂದರ್ಭದಲ್ಲಿಅತಿಥಿಗಳಾಗಿ ಯಾದಗಿರಿಯ ಶಾಸಕರಾದ ಚನ್ನಾರೆಡ್ಡಿಪಾಟೀಲ್ ತುನ್ನೂರು ಹಾಗೂ ಹಲ್ ಕಟ್ಟ ಹಜರತ್ ಅಲ್ ಹಾಜ್ ಸೈಯದ್ ಅಬು ತುರಬ್ ಖಾದ್ರಿ, ಮರೆಪ್ಪ ಚೆ–ಟ್ಟೆರಕರ್ , ಚನ್ನಪ್ಪ ಗೌಡ ಮೋಸಂಬಿ,ಅಜೀಜ್ ಅಹಮದ್ ಶಾಹನ, ಡಾಕ್ಟರ್ ಉಮೇಶ್ ಮದ್ನಾಳ್, ಜಿಲ್ಲಾ ಸಂಚಲಕ ಮೀನಾಜೂದ್ದಿನ್ ಹುಜರ್ ಇತರ ಗಣ್ಯರು ವೇದಿಕೆ ಮೇಲೆ ಉಪಸ್ಥಿತರಿದ್ದರು.

# ಮನೆ ಕಳ್ಳತನ ಮಾಡುವ ಕುಖ್ಯಾತ ಆರೋಪಿ ಬಂಧನ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ :ಫೆ.9: ಜಿಲ್ಲೆಯ ಗಂಗಾವತಿ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿರುವ ಮನೆ ಕಳ್ಳತನ ಪ್ರಕರಣಗಳಲ್ಲಿನ ಆರೋಪಿತರ ಪತ್ತೆಗಾಗಿ ಶ್ರೀ ಡಾ::ರಾಮ್.ಎಲ್.ಅರಸಿದ್ದಿ, ಖಕಖ. ಪೊಲೀಸ್ ಅಧೀಕ್ಷಕರು ಕೊಪ್ಪಳ. ಶ್ರೀ ಆರ್.ಹೇಮಂತ್ ಕುಮಾರ್, ಹೆಚ್ಚುವರಿ ಪೊಲೀಸ್ ಅಧೀಕ್ಷಕರು, ಕೊಪ್ಪಳ ಹಾಗೂ ಶ್ರೀ ಸಿದ್ದಲಿಂಗಪ್ಪಗೌಡ ಪಾಟೀಲ್, ಪೊಲೀಸ್ ಉಪವಿಭಾಗಾಧಿಕಾರಿಗಳುಗಂಗಾವತಿ ರವರ ಮಾರ್ಗದರ್ಶನದಲ್ಲಿ (01) ಶ್ರೀ ಪ್ರಕಾಶ ಮಾಳಿ. ಪೊಲೀಸ್ ಇನ್ಸಪೆಕ್ಟರ್ ಗಂಗಾವತಿ ನಗರ ಠಾಣೆ. (02) ಶ್ರೀ ಟಿ.ಜಿ. ನಾಗರಾಜ, ಪಿ.ಎಸ್.ಐ. (03) ಶ್ರೀ ವಿಶ್ವನಾಥ ಸಿಹೆಚ್‌ಸಿ 07. (04) ಶ್ರೀ ಮರಿಶಾಂತಗೌಡ ಸಿಹೆಚ್‌ಸಿ 21, (05) ಶ್ರೀ ಚಿರಂಜೀವಿ ಸಿ.ಹೆಚ್.ಸಿ 270, (06) ಸುಭಾಷ ಹೆಚ್.ಸಿ 191, (07) ರಾಘವೇಂದ್ರ ಹೆಚ್.ಸಿ 241, (08) ಮೈಲಾರಪ್ಪ ಸಿಪಿಸಿ 171, (09) ಗ್ಯಾನಪ್ಪ ಹೆಚ್.ಕುರಿ ಸಿಪಿಸಿ 131 (10) ವಾಹನ ಚಾಲಕ ನೀಲಪ್ಪ ಎ.ಪಿ.ಸಿ. ಗಂಗಾವತಿ ನಗರ ಪೊಲೀಸ್ ಠಾಣೆ ಹಾಗೂ ಗಣಕಯಂತ್ರ ವಿಭಾಗದ ಪ್ರಸಾದ ಹಾಗೂ ಮಂಜುನಾಥ ಇವರನ್ನೊಳಗೊಂಡ ಒಂದು ತಂಡ ರಚನೆ ಮಾಡಿದ್ದು ಇರುತ್ತದೆ. ಪ್ರಕರಣಗಳ ಪತ್ತೆ ಕಾರ್ಯಕ್ಕೆ ನೇಮಕ ಮಾಡಿದ ತನಿಖಾ ತಂಡವು ಆರೋಪಿತರ ಸುಳಿವು ಕುರಿತು ಮಾಹಿತಿ ಸಂಗ್ರಹಿಸಿ ದಿನಾಂಕ 09-02-2025 ರಂದು ಆರೋಪಿ ಹನುಮೇಶ ಬಜಂತ್ರಿ ತಂದೆ ಬಸಪ್ಪ ವಯಸ್ಸು 23 ವರ್ಷ, ಜಾ. ಬಜಂತ್ರಿ ಉ. ಬಳ್ಳೋಳ್ಳಿ ವ್ಯಾಪಾರ ಸಾ. ಸರಕಾರಿ ಆಸ್ಪತ್ರೆ ಹಿಂದೆ ಬಜಂತ್ರಿ ಓಣಿ ಕನಕಗಿರಿ ಈತನಿಗೆ ದಸ್ತಗಿರಿ ಮಾಡಿ ಸದರಿಯವನಿಗೆ ವಿಚಾರಣೆಗೆ ಒಳಪಡಿಸಿ ಆರೋಪಿತನು ಕಳ್ಳತನ ಮಾಡಿರುವ ಗಂಗಾವತಿ ನಗರ ಠಾಣೆಯ 01 ಪ್ರಕರಣ, ಬದಾಮಿ ಪೊಲೀಸ್ ಠಾಣೆಯ 02 ಪ್ರಕರಣಗಳು ಹಾಗೂ ಹಾವೇರಿ ಜಿಲ್ಲೆಯ ಸವಣೂರ ಪೊಲೀಸ್ ಠಾಣೆಯ 01 ಪ್ರಕರಣ ಈ ರೀತಿಯಾಗಿ ಒಟ್ಟು 04 ಪ್ರಕರಣಗಳನ್ನು ಪತ್ತೆ ಮಾಡಿ ಆರೋಪಿತನ ತಾಬಾದಿಂದ ಒಟ್ಟು 101 ಗ್ರಾಂ ತೂಕದ ಬಂಗಾರದ ಒಡವೆಗಳು ಒಟ್ಟು ಅಂದಾಜು ಕಿ.ರೂ. 8,78,000-00 ಹಾಗೂ ನಗದು ಹಣ 32,300-00 ರೂ ಸೇರಿ ಒಟ್ಟು 9,10,300-00 ರೂ ಬೆಲೆ ಬಾಳುವವುಗಳನ್ನು ಜಪ್ತಿ ಪಡಿಸಿಕೊಂಡು ಆರೋಪಿತನಿಗೆ ನ್ಯಾಯಾಂಗ ಬಂಧನಕ್ಕೆ ಕಳುಹಿಸಿದ್ದು ಇರುತ್ತದೆ.

ತನಿಖಾ ತಂಡದ ಕಾರ್ಯವನ್ನು ಮಾನ್ಯ ಜಿಲ್ಲಾ ಪೊಲೀಸ್ ಅಧೀಕ್ಷಕರು ಕೊಪ್ಪಳ ಜಿಲ್ಲೆ ರವರು ಪ್ರಶಂಶಿಸಿ ಬಹುಮಾನ ಘೋಷಿಸಿರುತ್ತಾರೆ.

# ಫೆ,12 ರಂದು ಸನ್ನತಿಯಲ್ಲಿ ಐತಿಹಾಸಿಕ ತ್ರಿಪಿಟಕ ಪಠಣ ಮಹೋತ್ಸವ ಕರ ಪತ್ರ ಲೋಕಾರ್ಪಣೆ



ಮಲ್ಲಮ್ಮ ನುಡಿ ವಾರ್ತೆ

ಶಹಾಪುರ:ಫೆ.9:ಫೆ,12ರಂದು ಚಿತಾಪುರ ತಾಲುಕಾ ಸನ್ನತಿ ಮಾಹಾಬೋಧಿ ಕ್ಷೇತ್ರದಲ್ಲಿ ಹಮ್ಮಿಕೊಂಡ, ಐತಿಹಾಸಿಕ ಪವಿತ್ರ ತ್ರಿಪಿಟಕ ಪಠಣ ಕಾರ್ಯಕ್ರಮದ ಅಂಗವಾಗಿ ಶಹಾಪುರ ಧಮ್ಮಗಿರಿ ಸಾರಿಪುತ್ರ ಬುದ್ದ ವಿಹಾರದಲ್ಲಿ ನಿನ್ನೆ ಕರಪತ್ರ ಲೋಕಾರ್ಪಣೆ ಮಾಡಲಾಯಿತು, ಮಾಹಾಬೋದಿ ಸೂಸೈಟಿ ಬೆಂಗಳೂರ, ಮತ್ತು ಲೈಟ್ ಆಫ್, ದಿ ಬುದ್ದ ಧಮ್ಮ ಪ್ರತಿಷ್ಠಾನ, ಅಂತರಾಷ್ಟ್ರೀಯ ತ್ರಿಪಿಟಕ ಪರಿಷತ್ತು, ಹಾಗೂ ಬೌದ್ದ ಮಾಹಾಸ್ತೂಪ ಅಭಿವೃದ್ದಿ ಸಂರಕ್ಷಣಾ ಸಮಿತಿ ಸನ್ನತಿ ಇವುಗಳ ಆಶ್ರೆಯದಲ್ಲಿ ಹಮ್ಮಿಕೊಂಡ, ಈ ಮಾಹಾ ಕಾರ್ಯಕ್ರಮಕ್ಕೆ ವಿದೇಶಗಳಿಂದ 108 ಜನ ದೇಶ ವಿದೇಶಗಳಿಂದ ಬೌದ್ದ ಬಿಕ್ಕುಗಳು ಆಗಮಿಸಲ್ಲಿದ್ದಾರೆ, ಶಹಾಪುರ ತಾಲುಕಿನಿಂದ ಪ್ರತಿ ಗ್ರಾಮಗಳಿಂದ ಹಳ್ಳಿ ಪಟ್ಟಣ, ನಗರಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಬೌದ್ದ ಅನುವಾಯಿಂಗಳು ದಲಿತಪರ ಕಾರ್ಯಕರ್ತರು ದಲಿತಪರ ಸಂಘಟನೆಗಳು ಮುಖಂಡರು, ದಲಿತಪರ ಚಿಂತಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಶಾಹಾಪುರ ಸಾರಿಪುತ್ರ ಬುದ್ದ ವಿಹಾರ ಸಮಿತಿಯ ಕಾರ್ಯದರ್ಶಿಗಳಾದ ನೀಲಕಂಠ ಬಡಿಗೇರ, ಧಮ್ಮ ಉಪಾಷಕರಾದ ದಲಿತ ಮುಖಂಡರಾದ ಮಲ್ಲಿಖಾರ್ಜುನ ಪೂಜಾರಿ, ಕರ ಪತ್ರ ಬಿಡುಗಡೆಗೊಳಿಸಿ ಕರೆ ನೀಡಿದರು. ಈ ಸಂಧರ್ಭದಲ್ಲಿ ದಮ್ಮ ಉಪಾಷಕರು, ದಲಿತ ಮುಖಂಡರಾದ ಬಾಬುರಾವ್ ಬೂತಾಳೆ, ಮೋನಯ್ಯ ಹೋಸಮನಿ, ಕಸಾಪ ಅಧ್ಯಕ್ಷರಾದ ಡಾ, ರವಿಂದ್ರನಾಥ ಹೋಸಮನಿ, ನಾಗಣ್ಣ ಬಡಿಗೇರ, ಶಿವುಕುಮಾರ ತಳವಾರ, ಭೀಮರಾಯ ಹೊಸಮನಿ, ಬಿ.ಎಮ್, ಪೂಜಾರಿ, ಮಾನಪ್ಪ ಗಡ್ಡದ, ಮಲ್ಲಿಕಾರ್ಜುನ ಹೊಸಮನಿ, ಬಸವರಾಜ ಗುಡಿಮನಿ, ಮರೆಯಪ್ಪ ಜಾಲಿಮೆಂಚಿ, ಚಂದ್ರಶೇಖರ ಗುತ್ತೆದಾರ ಬೇವಿನಳ್ಳಿ, ಸೇರಿದಂತೆ ಇತರರು ಹಾಜರಿದ್ದರು,

# ನಗರ ಠಾಣೆ ಪಿಎಸ್ ಐ ಮಂಜೇಗೌಡ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಎಸ್ಪಿ ಕಚೇರಿ ಮುಂದೆ ಮಂಗಳಮುಖಿಯರ ಪ್ರತಿಭಟನೆ



ಮಲ್ಲಮ್ಮ ನುಡಿ ವಾರ್ತೆ

ಮಂಜೇಗೌಡ ವಿರುದ್ಧ ಮಂಗಳಮುಖಿಯರ ಆರೋಪ

* ಕ್ರಮಕ್ಕೆ ಆಗ್ರಹಿಸಿ ಎಸ್ ಪಿಗೆ ಮೊರೆ

ದೂರು ನೀಡಲು ಹೋದ ಮಹಿಳೆ ಮೇಲೆ ಪಿಎಸ್ ಐ ಹಲ್ಲೆ

ಯಾದಗಿರಿ:ಮಂಗಳಮುಖಿಯರ ಎರಡು ಗುಂಪಿನ ಮಧ್ಯೆ ನಡೆದ ಗಲಾಟೆಯ ಬಗ್ಗೆ ದೂರು ನೀಡಲು ಹೋದ ವಿಧವೆಯ ಮೇಲೆ ಇಲ್ಲಿನ ನಗರ ಠಾಣೆ ಪಿಎಸ್ ಐ ಮಂಜೇಗೌಡ ಹಲ್ಲೆ ಮಾಡಿದ ಆರೋಪ ಕೇಳಿ ಬಂದಿದೆ.

ಮೈಕ್ರೋಫೈನಾನ್ಸ್‌ನಲ್ಲಿ ಪಡೆದ ಸಾಲದ ಕಂತು ತೀರಿಸುವ ವಿಷಯಕ್ಕೆ ಸಂಬಂಧಿಸಿದಂತೆ ಮಂಗಳಮುಖಿಯರ ಎರಡು ಗುಂಪುಗಳ ಮಧ್ಯೆ ಗಲಾಟೆ ನಡೆದಿತ್ತು. ಒಂದು ಗುಂಪಿನವರು ಶನಿವಾರ ನಗರ ಠಾಣೆ ಆಗಮಿಸ ವೇಳೆ ಮುತ್ತಮ್ಮ ಮಡಿವಾಳ ಆಗೂ ಆಕೆಯ ಮಗ ವೀರೇಶ ಎಂಬಾತನ ಮೇಲೆ ಮಂಜೇಗೌಡ ಹಲ್ಲೆ ಮಾಡಿದ್ದಲ್ಲದೆ, ಅವರ ಬಳಿ ಇದ್ದ 20 ಸಾವಿರ ರೂ.ಹಣ ಕಸಿದುಕೊಂಡಿದ್ದಾರೆ ಎಂದು ಹಲ್ಲೆಗೊಳಗಾದ ಮುತ್ತಮ್ಮ ಆರೋಪಿಸಿದ್ದಾರೆ.

ಇಲ್ಲಿನ ಎಸ್ ಪಿ ಕಚೇರಿಗೆ ದೂರು ಸಲ್ಲಿಸಲು ಬಂದ ಮಂಗಳಮುಖಿ ಜೋಯಾ ಮಾತನಾಡಿ, ಪಿಎಸ್ ಐ ಮಹಿಳೆ ಎಂಬುದನ್ನೂ ನೋಡದೆ ನನ್ನ ಅತ್ತೆಯ ಎದೆಗೆ, ತಲೆಗೆ ಹಲ್ಲೆ ಮಾಡಿದ್ದಾರೆ. ಅಲ್ಲದೆ ಅವಾಚ್ಯ ಶಬ್ಧಗಳಿಂದ ನಿಂದಿಸಿದ್ದು, ಈ ಬಗ್ಗೆ ಠಾಣೆಯಲ್ಲಿದ್ದ ಸಿಸಿ ಕ್ಯಾಮರಾಗಳಿಂದ ಎಸ್ ಪಿ ಅವರು ಪರಿಶೀಲನೆ ನಡೆಸಿ ಮಂಜೇಗೌಡ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ಮಾಡಲಾಗೂವುದು.

# ಸುರುಪುರ ಸಂಸ್ಥಾನದ ಇತಿಹಾಸ ಯುವಪೀಳಿಗೆ ಅರ್ಥೈಯಿಸಿಕೊಳ್ಳಲು ಕರೆ



ಮಲ್ಲಮ್ಮ ನುಡಿ ವಾರ್ತೆ

ಶಹಾಪುರ:ಫೆ.9:1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸುರುಪುರ ನಾಲ್ವಡಿ ರಾಜಾ ವೆಂಕಟಪ್ಪನಾಯಕರ ಪಾತ್ರ ಅತ್ಯಂತ ಪ್ರಮುಖವಾಗಿತ್ತು, ಸುರುಪುರ ಸಂಸ್ಥಾನ ಇತಿಹಾಸವನ್ನು ಮುಂದಿನ ಪೀಳಿಗೆಗೆ ಅರ್ಥೈಹಿಸಿಕೊಳ್ಳುವ ಜವಾಬ್ದಾರಿ ಇಂದಿನ ಯುವಕರ ಮೇಲಿದೆ ಎಂದು ಡಾ, ರಾಜಾ ವೆಂಕಟಪ್ಪನಾಯಕ ರವರು ಕರೆ ನೀಡಿದರು, ಅವರು ಶಹಾಪುರ ತಾಲುಕಿನ ಬೀ,ಗುಡಿಯಲ್ಲಿ ಸುರುಪುರ ಸಂಸ್ಥಾನದ ಇತಿಹಾಸ ಸಂಶೋಧನ ಕೇಂದ್ರ ಆಂಗ್ಲ ಮಾಧ್ಯಮ ಶಾಲೆ ಭೀ,ಗುಡಿ ಅವರಣದಲ್ಲಿ ನಡೆದ ಸುರುಪುರ ವಿಜಯೋತ್ಸವ ಮತ್ತು 1857 ಪ್ರಥಮ ಸ್ವತಂತ್ರ್ಯ ಮೋಹತ್ಸವ ಸಂಭ್ರಮ ಕುರಿತು ನೆನಪು ಕಾರ್ಯಕ್ರಮನ್ನು ಉಧ್ಘಾಟಿಸಿ ಮಾತನಾಡಿದರು. ವಿಶ್ವವಿಖ್ಯಾತ ಗರುಡಾದ್ರಿ ಕಲಾವಿದರು ಕಲಬುಗಿಯ ಡಾ.ವಿಜಯ ಹಾಗರಗಿ ಮಾತನಾಡಿ, ಬ್ರೀಟಿಷ ಕ್ಯಾಪ್ಟನ್ ಕೊಂದ ಕಿರ್ತಿ ಸುರುಪುರ ಸಂಸ್ಥಾನಕ್ಕೆ ಸಲ್ಲುತ್ತದೆ ಎಂದರು, ಬಲವಂತ ಬಹರಿ ಡಾ, ರಾಜಾ ಕೃಷ್ಣಪ್ಪನಾಯಕ ಸುರುಪುರವರು ಅಧ್ಯಕ್ಷತೆ ವಹಿಸಿದ್ದರು. ತಾಲುಕಾ ಆರೋಗ್ಯ ಅಧಿಕಾರಿ ಡಾ, ವೆಂಕಟಪ್ಪನಾಯಕ ಅರಕ್ಷಕ ಉಪಾಧಿಕ್ಷಕರಾದ ಕೃಷ್ಣಸುಬೇದಾರ, ನ್ಯಾಯವಾದಿಗಳಾದ ಉಮೇಶ ಮೂಡಬೂಳ. ಉಪನ್ಯಾಷಕರಾದ ರಾಜಗೋಪಾಲ ವಿಭೂತಿ, ಆಗಮಿಸಿದ್ದರು, ಮರೆಪ್ಪನಾಯಕ, ಎಚ್, ಶ್ರವಣಕುಮಾರನಾಯಕ, ರಮೇಶ ತಗ್ಗಿನಮನಿ, ಪರಶುರಾಮ ನಾಯಕ, ಸಚಿನಕುಮಾರ ನಾಯಕ, ರಮೇಶ ಕುಲಕರ್ಣಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು, ರಾಜಕುಮಾರ ದೊರೆ ಉಪಾಧ್ಯಾಯರು ಕಾರ್ಯಕ್ರಮ ನೀರೂಪಿಸಿದರು. ಕನಕಪ್ಪ ಮಾಗಣಗೇರಿ, ಹಣಮಂತ ವನದುರ್ಗಾ, ಅರವಿಂದ ಮೂಡಬೂಳ. ಮಾನಪ್ಪ ಹಡಪದ, ಪ್ರದೀಪ ಅಣಿಬಿ, ಉಪಸ್ಥಿತಿರಿದ್ದರು,

# ಗುರುಕುಲ ಮಾದರಿ ಶಿಕ್ಷಣ ಅವಶ್ಯಕ



ಮಲ್ಲಮ್ಮ ನುಡಿ ವಾರ್ತೆ

ಬೀದರ್:ಫೆ.9:ಪ್ರಸ್ತುತ ಮಕ್ಕಳಿಗೆ ಸನಾತನ ಗುರುಕುಲ ಮಾದರಿಯ ಶಿಕ್ಷಣ ಅವಶ್ಯಕವಾಗಿದೆ ಎಂದು ಬೇಮಳಖೇಡ ಹಿರೇಮಠ ಸಂಸ್ಥಾನದ ಡಾ. ರಾಜಶೇಖರ ಶಿವಾಚಾರ್ಯ ನುಡಿದರು.

ನಗರದ ಚಿದ್ರಿ ರಸ್ತೆಯಲ್ಲಿನ ಜಿನಿಯಸ್ ಪಬ್ಲಿಕ್ ಶಾಲೆಯಲ್ಲಿ ಅಮೃತ ಉತ್ಸವ ಶೀರ್ಷಿಕೆಯಡಿ ಶನಿವಾರ ಆಯೋಜಿಸಿದ್ದ ಶಾಲಾ ವಾರ್ಷಿಕೋತ್ಸವದ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಜಾಗತೀಕರಣದಿಂದಾಗಿ ಭಾರತೀಯ ಸಂಸ್ಕೃತಿ, ಪರಂಪರೆಗೆ ಧಕ್ಕೆ ಉಂಟಾಗುತ್ತಿದೆ. ಮಕ್ಕಳನ್ನು ಆದರ್ಶ ಪ್ರಜೆಗಳನ್ನಾಗಿ ರೂಪಿಸಲು ಸಾಧ್ಯವಾಗುತ್ತಿಲ್ಲ ಎಂದು ಕಳವಳ ವ್ಯಕ್ತಪಡಿಸಿದರು.

ದೇಶದ ಪರಂಪರೆ ಹಾಗೂ ಸಂಸ್ಕೃತಿಯನ್ನು ಉಳಿಸುವ ದಿಸೆಯಲ್ಲಿ ಮಕ್ಕಳಿಗೆ ಸಂಸ್ಕಾರಯುತ ಶಿಕ್ಷಣ ನೀಡುತ್ತಿರುವ ಶಾಲೆಯ ಕಾರ್ಯ ಪ್ರಶಂಸನೀಯ ಎಂದು ಹೇಳಿದರು.

ಸರಸ್ವತಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಕಾರ್ಯಕ್ರಮ ಉದ್ಘಾಟಿಸಿದ ಕೇಂದ್ರ ಸರ್ಕಾರದ ರಾಜ್ಯ ಅಭಿವೃದ್ಧಿ, ಸಮನ್ವಯ ಹಾಗೂ ಮೇಲುಸ್ತುವಾರಿ ಸಮಿತಿಯ ಸದಸ್ಯ ಶಿವಯ್ಯ ಸ್ವಾಮಿ ಮಾತನಾಡಿ, ದೇಶಕ್ಕೆ ಮೆಕಾಲೆ ಶಿಕ್ಷಣ ಬೇಕಿಲ್ಲ ಎಂದು ಹೇಳಿದರು.

ಸೊನ್ನೆಯನ್ನು ಕಂಡು ಹಿಡಿದ ಗಣಿತಜ್ಞ ಆರ್ಯಭಟ ಭಾರತೀಯದವರು. ಸದ್ಯ ವಿದೇಶಿಯರೂ ದೇಶದ ಪಾರಂಪರಿಕ ಶಿಕ್ಷಣ ಹಾಗೂ 108 ಕಲೆಗಳನ್ನು ಕಲಿಯುತ್ತಿದ್ದಾರೆ. ಮಹಾರಾಷ್ಟ್ರದ ಕೊಲ್ಹಾಪುರದ ಕನ್ಹೇರಿ ಮಠ ಪಾರಂಪರಿಕ ಶಿಕ್ಷಣ ನೀಡುತ್ತಿದೆ. ಭಾರತೀಯರು ಪಾರಂಪರಿಕ ಶಿಕ್ಷಣ ಹಾಗೂ ಕಲೆಗಳ ಮೊರೆ ಹೋಗಬೇಕಿದೆ ಎಂದು ತಿಳಿಸಿದರು.

ಮಕ್ಕಳಿಂದ ನಡೆದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಸಭಿಕರ ಗಮನ ಸೆಳೆದವು. ನಗರಸಭೆ ಮಾಜಿ ಅಧ್ಯಕ್ಷೆ ಫಾತಿಮಾ ಅನ್ವರ್ ಅಲಿ, ಅಶ್ವಿನಿ ಪಬ್ಲಿಕ್ ಶಾಲೆಯ ಅಧ್ಯಕ್ಷ ಶಂಭುಲಿಂಗ ಕುದುರೆ ಮಾತನಾಡಿದರು. ಶಾಲೆಯ ಅಧ್ಯಕ್ಷ ಪ್ರವೀಣಕುಮಾರ ಸ್ವಾಮಿ, ನಿರ್ದೇಶಕ ಶಿವಲಿಂಗಯ್ಯಸ್ವಾಮಿ, ಪ್ರಾಚಾರ್ಯೆ ಮುಕ್ತಾಂಜಲಿ, ಪ್ರಸಾದ್ ಕುದರೆ, ಅಶ್ವಿನಿ ಕುದರೆ ಉಪಸ್ಥಿತರಿದ್ದರು.

# ಬಸವಣ್ಣ ನವರು ಹೆಣ್ಣು ಮಕ್ಕಳಿಗೆ ಪ್ರಥಮವಾಗಿ ಸ್ವಾತಂತ್ರ ಕಲ್ಪಿಸಿದವರು



ಬೀದರ:ಫೆ.9:ಸಮಾನತೆ ಸಾರಿದ ಬಸವಣ್ಣ ವಿಶ್ವಮಾನವ, ಜಗತ್ತಿನ ಇತಿಹಾಸದಲ್ಲಿ ಹೆಣ್ಣು ಮಕ್ಕಳಿಗೆ ಪ್ರಥಮ ಸ್ವಾತಂತ್ರ ಕಲ್ಪಿಸಿದವರು. ವ್ಯಕ್ತಿಗಳ ಮಧ್ಯೆ ಭೇಧ-ಭಾವ ಅಳಿಸಿ ನಾವೆಲ್ಲರೂ ಸಮಾನರು ಎಂಬ ತತ್ವ ಪ್ರತಿಪಾದಿಸಿ ಇಂದು ಸಹ ನಮಗೆ ಅವರ ಮೌಲ್ಯಗಳು ದಿಗ್ದರ್ಶನವಾಗಿವೆ ಎಂದು ಶರಣೆ ಶೈನಿ ಪ್ರದೀಪ ಗುಂಟೆ ನುಡಿದರು.

ಇಂದು ಬಸವ ಸೇವಾ ಪ್ರತಿಷ್ಠಾನ ಆಯೋಜಿಸಿದ 23ನೇ ವಚನ ವಿಜಯೋತ್ಸವ ನಿಮಿತ್ತ ಹಮ್ಮಿಕೊಂಡ ಬೈಕ್ ಮತ್ತು ಕಾರ್ ರ್‍ಯಾಲಿ ಉದ್ಘಾಟಿಸಿ ಶೈನಿ ಪ್ರದೀಪ ಗುಂಟಿ ಮಾತನಾಡುತ್ತ ಇಂದಿನ ಮಕ್ಕಳಿಗೆ ಸಂಸ್ಕೃತಿ ತಿಳಿಸುವುದು ತುಂಬ ಮುಖ್ಯ, ಮೌಲ್ಯ ಕುಸಿಯುತ್ತಿರುವ ಇಂದಿನ ಕಾಲ ಘಟದಲ್ಲಿ ಶರಣರ ವಚನಗಳು ಜೀವನದ ಭವಿಷ್ಯ ನಿರ್ಮಿಸಬಹುದಾಗಿದೆ ಎಂದು ನುಡಿದರು.

ಮುಖ್ಯ ಅತಿಥಿಗಳಾದ ಹಂಸ ಗಿರೀಶ್ ಬದೋಲೆ ಮಾತನಾಡುತ್ತ ಹೆಣ್ಣು ಮಕ್ಕಳು ಇಂದು ಇಷ್ಟು ಜನ ಸಂಖ್ಯೆಯಲ್ಲಿ ಬೈಕ್ ರ್‍ಯಾಲಿಯಲ್ಲಿ ಬಂದಿರುವುದು ಸಂತಸ ಮೂಡಿಸಿದೆ. ಅಕ್ಕಮಹಾದೇವಿ ನಮ್ಮೆಲರ ಆದರ್ಶ ಮಹಾಮಾತೆ, ಅಕ್ಕನ ಅನುಭಾವ ಧೈರ್ಯ ಆತ್ಮ ವಿಶ್ವಾಸ, ನಮ್ಮಲ್ಲಿ ಬರಬೇಕು. ಮನೆಯಿಂದಲೆ ಸದಾಚಾರಯದ ಕ್ರಾಂತಿ ನೆಲೆಗೊಳ್ಳಬೇಕಾದರೆ ಹೆಣ್ಣು ಮಕ್ಕಳು ಮುಂದೆ ಬರಬೇಕು. ಸಂಸಾರ ಸಂತೃಪ್ತಿಯಿಂದ ಮುನ್ನಡೆಸಲು ಶರಣರ ಆಚಾರ ವಿಚಾರ ಎಲ್ಲರಲ್ಲಿ ನೆಲೆಗೊಳ್ಳಬೇಕೆಂದು ಕರೆ ನೀಡಿದರು.

ಅಕ್ಕ ನಾಗಮ್ಮನ ಪಾತ್ರದಲ್ಲಿ ಎಲ್ಲರ ಗಮನ ಸೇಳೆದ ಕರ್ನಾಟಕ ರಾಜ್ಯ ಮಹಿಳಾ ಸಹಕಾರ ಮಹಾಮಂಡಳ ಅಧ್ಯಕ್ಷರಾದ ಶಕುಂತಲಾ ಬೆಲ್ದಾಳೆ ಮಾತನಾಡಿ ನಾವೇಲ್ಲರು ಒಗಟ್ಟಾಗಿ ಜಾಗೃತಿ ಮಾಡಿ ಬಸವ ತತ್ವ ಬೆಳೆಸಿ ಉಳಿಸಿದರೆ ಶರಣ ಸಂಸೃತಿ ಬೆಳೆಯುವುದರಲ್ಲಿ ಸಂದೇಹವಿಲ್ಲ ಎಂದು ನುಡಿದರು.

ನಗರ ಸಭೆ ಉಪಧ್ಯಾಕ್ಷರಾದ ಲಕ್ಷ್ಮಿಬಾಯಿ ಹಂಗರಗಿ ತಾಯಿ ಬಸವಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ವೇದಿಕೆ ಮೇಲೆ ನಗರ ಸಭೆ ಸದ್ಯಸರಾದ ಸಂತೋಷಿ ಅರುಣ ಹೊತಪೇಟ್, ಶಶಿಧರ ಹೊಸಹಳ್ಳಿ, ಮಹೇಶ ಮೈಲಾರೆ ಹಾಗೂ ರಾಷ್ಟ್ರೀಯ ಬಸವದಳದ ಅಧ್ಯಕ್ಷರಾದ ಸೋಮಶೇಖರ ಪಾಟೀಲ ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಡಾ. ಗಂಗಾಂಬಿಕಾ ಅಕ್ಕ ಮಾತನಾಡುತ್ತ ವಚನ ಸಂಸೃತಿ ನಮ್ಮೆಲ್ಲರ ಮನೆಯ ಮನಗಳಲ್ಲಿ ಮೊಳಗಬೇಕು. ಭೇದ ಭಾವ ಬಿಟ್ಟು ವಚನಗಳು ಅರಿತು ಕೊಳ್ಳಬೇಕು. ಕಲ್ಯಾಣ ಕರ್ನಾಟಕದ ಹೆಮ್ಮೆಯ ಮೂರು ದಿವಸಗಳ ವಚನ ವಿಜೋತ್ಸವದಲ್ಲಿ ಪಾಲ್ಗೊಳ್ಳಬೇಕೆಂದು ಮನವಿ ಮಾಡಿದರು.

ಮೊದಲಿಗೆ ನಿರ್ಮಲ ಮಸೂದಿ ವಚನ ಪ್ರಾರ್ಥನೆ ಮಾಡಿದರೆ, ಉಷಾ ಮಿರ್ಚೆ ಸ್ವಾಗತಿಸಿದರೆ, ಜ್ಞಾನದೇವಿ ಬಬಛಡೆ ನಿರೂಪಿಸಿದರೆ, ವಿದ್ಯಾವತಿ ಬಸವರಾಜ ಉಂಡೆ ವಂದಿಸಿದರು. ಬೈಕ್ ರ್‍ಯಾಲಿಯಲ್ಲಿ ಜೈರಾಜ ಖಂಡ್ರೆ, ಗುಂಡಪ್ಪ ಬಳತೆ, ಶಿವರಾಜ ಮದಕಟ್ಟಿ, ರಾಚಪ್ಪ ಪಾಟೀಲ, ಜಯದೇವಿ ಯದಲಾಪುರೆ, ಜಗದೇವಿ ಮದಕಟ್ಟಿ, ಸುವರ್ಣ ಚಿಮಕೊಡೆ, ಮಲ್ಲಮ್ಮ ಆರ್ ಪಾಟೀಲ, ಪ್ರತಿಭಾ ಗಾದಗಿ, ವಿಜಯಲಕ್ಷ್ಮಿ ಪಾಟೀಲ, ಡಾ. ವಿಜೇಶ್ರೀ ಬಶೆಟ್ಟಿ, ಅರುಣ ಹೊತಪೇಟ್, ಧನರಾಜ ಹಂಗರಗಿ, ನಂದುಕುಮಾರ ಪಾಟೀಲ, ಸುರೇಶ ಹಳೆಂಬುರ್, ಬಸವರಾಜ ಬತಮುರ್ಗೆ, ವಿವೇಕ ವಾಲಿ, ಸಂತೋಷ ಎಸ್. ಪಾಟೀಲ, ಪ್ರಕಾಶ ಸಾವಳಗಿ, ಬಸವರಾಜ ಧನ್ನೂರ, ರಾಜೇಂದ್ರಕುಮಾರ ಗಂದಗೆ, ಯೋಗೇಂದ್ರ ಯದಲಾಪುರ, ಅಲ್ಲಮಪ್ರಭು ನಾವದಗೇರೆ, ಶಿಲ್ಪಾ ಮಜಗೆ, ಆರತಿ ಲಕ್ಕಶೆಟ್ಟಿ, ಶಾಂತಾ ಕೋಡಗೆ, ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು. ಸುಮಾರು 150 ಕಾರ್ ಹಾಗೂ 200 ಬೈಕ್‌ಗಳು ಗುಂಪಾದಿಂದ ಹೊರಟು ಬೊಮ್ಮಗೊಂಡೇಶ್ವರ ವೃತ್ತ, ಅಂಬೇಡ್ಕರ್ ವೃತ್ತ, ಶಿವಾಜಿ ವೃತ್ತ, ಹರಳಯ್ಯ ವೃತ್ತ, ಕನ್ನಡಾಂಬೆ ವೃತ್ತ, ಮಡಿವಾಳ ವೃತ್ತ, ಬಸ್‌ಸ್ಟ್ಯಾಂಡ್ ಮುಖಾಂತರ ಪಾಪನಾಶ ಹಿಂದುಗಡೆಯ ಬಸವಗಿರಿಯಲ್ಲಿ ಸಮಾಪನಗೊಳಿಸಲಾಯಿತು. ಕೊನೆಯಲ್ಲಿ ಎಲ್ಲರಿಗೆ ಪ್ರಸಾದ ವ್ಯವಸ್ಥೆ ಕಲ್ಪಿಸಲಾಯಿತು. 50 ಮಹಿಳೆಯರಿಗೆ ಮಹೇಶ ಮೈಲಾರೆ ಉಚಿತವಾಹಿ ಹೆಲ್ಮೆಟ್ ವಿತರಿಸಿದರು.

INVEST KARNATAKA



**ಶ್ರೀ ಸಿದ್ದರಾಮಯ್ಯ**
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ



**ಶ್ರೀ ಡಿ.ಕೆ. ಶಿವಕುಮಾರ್**
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ



**ಶ್ರೀ ಎಂ.ಬಿ. ಪಾಟೀಲ**
ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು
ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯರವರೊಡನೆ ಸಂವಾದ ನಡೆಸುತ್ತಿರುವುದು

# ಭವಿಷ್ಯದ ಪ್ರಗತಿಯನ್ನು ಒಟ್ಟಾಗಿ ರೂಪಿಸೋಣ

ಸಮರ್ಥ, ಸಮಗ್ರ, ಸದೃಢ ಹಾಗೂ ತಂತ್ರಜ್ಞಾನ ಆಧಾರಿತ ಭವಿಷ್ಯವನ್ನು ಮರುಕಲ್ಪಿಸುವ ಸಲುವಾಗಿ ಜಾಗತಿಕ ಕೈಗಾರಿಕಾ ಪ್ರವರ್ತಕರೆಲ್ಲರೂ ಇನ್ವೆಸ್ಟ್ ಕರ್ನಾಟಕ 2025 ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದು, ಈ ಸಮಾವೇಶದಲ್ಲಿ ನೀವೂ ಭಾಗವಹಿಸಿ ಹೊಸ ಅವಕಾಶಗಳು ಮತ್ತು ಜಾಗತಿಕ ಪಾಲುದಾರಿಕೆಗಳನ್ನು ಬೆಳೆಸಿಕೊಳ್ಳುವುದರೊಂದಿಗೆ ಕರ್ನಾಟಕದ ಪರಿವರ್ತನಾತ್ಮಕ ಪ್ರಗತಿಯಲ್ಲಿ ಭಾಗಿಯಾಗಿ.






# ಪ್ರಗತಿಯ ಮರುಕಲ್ಪನೆ

ಇನ್ವೆಸ್ಟ್ ಕರ್ನಾಟಕ 2025

**ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ**

ಬೆಂಗಳೂರು ಅರಮನೆ
ಬೆಂಗಳೂರು

12 ರಿಂದ 14
ಫೆಬ್ರವರಿ 2025

ಇಲ್ಲಿ ನೋಂದಾಯಿಸಿಕೊಳ್ಳಿ

ಉದ್ಘಾಟನೆ: 11 ಫೆಬ್ರವರಿ 2025



ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿ ಸಾಧಿಸಲು ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು. -ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತಕರ್ತವ್ಯ

ಗಡಿಭಾಗದ ಹಾಗೂ ವಿಶೇಷ ಮಾಧ್ಯಮ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು

ಕರ್ನಾಟಕ ವಾರ್ತೆ